Test Paper : **III**

Test Subject : **POLITICAL SCIENCE**

Test Subject Code : **K-0515**

Test Booklet Serial No. : ____________________

OMR Sheet No. : ____________________

Roll No. | | | | | | | | |

(Figures as per admission card)

**Name & Signature of Invigilator/s**

Signature : ____________________

Name : ____________________

**Paper : III**

**Subject : POLITICAL SCIENCE**

Time : 2 Hours 30 Minutes Maximum Marks : 150

Number of Pages in this Booklet : **32** Number of Questions in this Booklet : **75**

### ಅಭ್ಯರ್ಥಿಗಳಿಗೆ ಸೂಚನೆಗಳು

1. ಈ ಪುಟದ ಮೇಲ್ತುದಿಯಲ್ಲಿ ಒದಗಿಸಿದ ಸ್ಥಳದಲ್ಲಿ ನಿಮ್ಮ ರೋಲ್ ನಂಬರನ್ನು ಬರೆಯಿರಿ.
2. ಈ ಪತ್ರಿಕೆಯು ಬಹು ಆಯ್ಕೆ ವಿಧದ ಎಪ್ಪತ್ತೈದು ಪ್ರಶ್ನೆಗಳನ್ನು ಒಳಗೊಂಡಿದೆ.
3. ಪರೀಕ್ಷೆಯ ಪ್ರಾರಂಭದಲ್ಲಿ, ಪ್ರಶ್ನೆಪುಸ್ತಿಕೆಯನ್ನು ನಿಮಗೆ ನೀಡಲಾಗುವುದು. ಮೊದಲ 5 ನಿಮಿಷಗಳಲ್ಲಿ ನೀವು ಪುಸ್ತಿಕೆಯನ್ನು ತೆರೆಯಲು ಮತ್ತು ಕೆಳಗಿನಂತೆ ಕಡ್ಡಾಯವಾಗಿ ಪರೀಕ್ಷಿಸಲು ಕೋರಲಾಗಿದೆ.
   (i) ಪ್ರಶ್ನೆ ಪುಸ್ತಿಕೆಗೆ ಪ್ರವೇಶಾವಕಾಶ ಪಡೆಯಲು, ಈ ಹೊದಿಕೆ ಪುಟದ ಅಂಚಿನ ಮೇಲಿರುವ ಪೇಪರ್ ಸೀಲನ್ನು ಹರಿಯಿರಿ. ಸ್ಟಿಕ್ಕರ್ ಸೀಲ್ ಇಲ್ಲದ ಅಥವಾ ತೆರೆದ ಪುಸ್ತಿಕೆಯನ್ನು ಸ್ವೀಕರಿಸಬೇಡಿ.
   (ii) **ಪುಸ್ತಿಕೆಯಲ್ಲಿನ ಪ್ರಶ್ನೆಗಳ ಸಂಖ್ಯೆ ಮತ್ತು ಪುಟಗಳ ಸಂಖ್ಯೆಯನ್ನು ಮುಖಪುಟದ ಮೇಲೆ ಮುದ್ರಿಸಿದ ಮಾಹಿತಿಯೊಂದಿಗೆ ತಾಳೆ ನೋಡಿರಿ. ಪುಟಗಳು/ಪ್ರಶ್ನೆಗಳು ಕಾಣೆಯಾದ, ಅಥವಾ ದ್ವಿಪ್ರತಿ ಅಥವಾ ಅನುಕ್ರಮವಾಗಿಲ್ಲದ ಅಥವಾ ಇತರ ಯಾವುದೇ ವ್ಯತ್ಯಾಸದ ದೋಷಪೂರಿತ ಪುಸ್ತಿಕೆಯನ್ನು ಕೂಡಲೆ 5 ನಿಮಿಷದ ಅವಧಿ ಒಳಗೆ, ಸಂವೀಕ್ಷಕರಿಂದ ಸರಿ ಇರುವ ಪುಸ್ತಿಕೆಗೆ ಬದಲಾಯಿಸಿಕೊಳ್ಳಬೇಕು. ಆ ಬಳಿಕ ಪ್ರಶ್ನೆ ಪತ್ರಿಕೆಯನ್ನು ಬದಲಾಯಿಸಲಾಗುವುದಿಲ್ಲ, ಯಾವುದೇ ಹೆಚ್ಚು ಸಮಯವನ್ನೂ ಕೊಡಲಾಗುವುದಿಲ್ಲ.**
4. ಪ್ರತಿಯೊಂದು ಪ್ರಶ್ನೆಗೂ (A), (B), (C) ಮತ್ತು (D) ಎಂದು ಗುರುತಿಸಿದ ನಾಲ್ಕು ಪರ್ಯಾಯ ಉತ್ತರಗಳಿವೆ. ನೀವು ಪ್ರಶ್ನೆಯ ಎದುರು ಸರಿಯಾದ ಉತ್ತರದ ಮೇಲೆ, ಕೆಳಗೆ ಕಾಣಿಸಿದಂತೆ ಅಂಡಾಕೃತಿಯನ್ನು ಕಪ್ಪಾಗಿಸಬೇಕು.
   **ಉದಾಹರಣೆ:** (A) (B) ● (D)
   (C) ಸರಿಯಾದ ಉತ್ತರವಾಗಿದ್ದಾಗ.
5. ಪ್ರಶ್ನೆಗಳಿಗೆ ಉತ್ತರಗಳನ್ನು, **ಪತ್ರಿಕೆ III ಪುಸ್ತಿಕೆಯೊಳಗೆ ಕೊಟ್ಟಿರುವ OMR ಉತ್ತರ ಹಾಳೆಯಲ್ಲಿ ಮಾತ್ರವೇ ಸೂಚಿಸತಕ್ಕದ್ದು.** OMR ಉತ್ತರ ಹಾಳೆಯಲ್ಲಿನ ಅಂಡಾಕೃತಿ ಹೊರತುಪಡಿಸಿ ಬೇರೆ ಯಾವುದೇ ಸ್ಥಳದಲ್ಲಿ ಗುರುತಿಸಿದರೆ, ಅದರ ಮೌಲ್ಯಮಾಪನ ಮಾಡಲಾಗುವುದಿಲ್ಲ.
6. OMR ಉತ್ತರ ಹಾಳೆಯಲ್ಲಿ ಕೊಟ್ಟ ಸೂಚನೆಗಳನ್ನು ಜಾಗರೂಕತೆಯಿಂದ ಓದಿರಿ.
7. ಎಲ್ಲಾ ಕರಡು ಕೆಲಸವನ್ನು ಪುಸ್ತಿಕೆಯ ಕೊನೆಯಲ್ಲಿ ಮಾಡತಕ್ಕದ್ದು.
8. ನಿಮ್ಮ ಗುರುತನ್ನು ಬಹಿರಂಗಪಡಿಸಬಹುದಾದ ನಿಮ್ಮ ಹೆಸರು ಅಥವಾ ಯಾವುದೇ ಚಿಹ್ನೆಯನ್ನು, ಸಂಗತವಾದ ಸ್ಥಳ ಹೊರತು ಪಡಿಸಿ, OMR ಉತ್ತರ ಹಾಳೆಯ ಯಾವುದೇ ಭಾಗದಲ್ಲಿ ಬರೆದರೆ, ನೀವು ಅನರ್ಹತೆಗೆ ಬಾಧ್ಯರಾಗಿರುತ್ತೀರಿ.
9. ಪರೀಕ್ಷೆಯು ಮುಗಿದನಂತರ, ಕಡ್ಡಾಯವಾಗಿ OMR ಉತ್ತರ ಹಾಳೆಯನ್ನು ಸಂವೀಕ್ಷಕರಿಗೆ ನೀವು ಹಿಂತಿರುಗಿಸಬೇಕು ಮತ್ತು ಪರೀಕ್ಷಾ ಕೊಠಡಿಯ ಹೊರಗೆ OMR ನ್ನು ನಿಮ್ಮೊಂದಿಗೆ ಕೊಂಡೊಯ್ಯಕೂಡದು.
10. ಪರೀಕ್ಷೆಯ ನಂತರ, ಪರೀಕ್ಷಾ ಪ್ರಶ್ನೆ ಪತ್ರಿಕೆಯನ್ನು ಮತ್ತು ನಕಲು OMR ಉತ್ತರ ಹಾಳೆಯನ್ನು ನಿಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.
11. **ನೀಲಿ/ಕಪ್ಪು ಬಾಲ್‌ಪಾಯಿಂಟ್ ಪೆನ್ ಮಾತ್ರವೇ ಉಪಯೋಗಿಸಿರಿ.**
12. **ಕ್ಯಾಲ್ಕುಲೇಟರ್ ಅಥವಾ ಲಾಗ್ ಟೇಬಲ್ ಇತ್ಯಾದಿಯ ಉಪಯೋಗವನ್ನು ನಿಷೇಧಿಸಲಾಗಿದೆ.**
13. **ಸರಿ ಅಲ್ಲದ ಉತ್ತರಗಳಿಗೆ ಋಣ ಅಂಕ ಇರುವುದಿಲ್ಲ.**
14. **ಕನ್ನಡ ಮತ್ತು ಇಂಗ್ಲೀಷ್ ಆವೃತ್ತಿಗಳ ಪ್ರಶ್ನೆ ಪತ್ರಿಕೆಗಳಲ್ಲಿ ಯಾವುದೇ ರೀತಿಯ ವ್ಯತ್ಯಾಸಗಳು ಕಂಡುಬಂದಲ್ಲಿ, ಇಂಗ್ಲೀಷ್ ಆವೃತ್ತಿಗಳಲ್ಲಿರುವುದೇ ಅಂತಿಮವೆಂದು ಪರಿಗಣಿಸಬೇಕು.**

### Instructions for the Candidates

1. Write your roll number in the space provided on the top of this page.
2. This paper consists of seventy five multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of the cover page. Do not accept a booklet without sticker seal or open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
4. Each item has four alternative responses marked (A), (B), (C) and (D). You have to darken the oval as indicated below on the correct response against each item.
   **Example** : (A) (B) ● (D)
   where (C) is the correct response.
5. Your responses to the question of Paper III are to be indicated in the **OMR Sheet kept inside the Booklet**. If you mark at any place other than in the ovals in OMR Answer Sheet, it will not be evaluated.
6. Read the instructions given in OMR carefully.
7. Rough Work is to be done in the end of this booklet.
8. If you write your name or put any mark on any part of the OMR Answer Sheet, except for the space allotted for the relevant entries, which may disclose your identity, you will render yourself liable to disqualification.
9. You have to return the test OMR Answer Sheet to the invigilators at the end of the examination compulsorily and must NOT carry it with you outside the Examination Hall.
10. You can take away question booklet and carbon copy of OMR Answer Sheet soon after the examination.
11. **Use only Blue/Black Ball point pen.**
12. **Use of any calculator or log table etc., is prohibited.**
13. **There is no negative marks for incorrect answers.**
14. **In case of any discrepancy found in the Kannada translation of a question booklet the question in English version shall be taken as final.**

# ರಾಜ್ಯಶಾಸ್ತ್ರ

## ಪೇಪರ್ – III

**ಗಮನಿಸಿ :** ಈ ಪತ್ರಿಕೆಯು **(75) ಎಪ್ಪತ್ತೈದು** ವಸ್ತುನಿಷ್ಠ ಮಾದರಿಯ ಪ್ರಶ್ನೆಗಳನ್ನೊಳಗೊಂಡಿದ್ದು, **ಪ್ರತಿಯೊಂದು** ಪ್ರಶ್ನೆಯೂ **ಎರಡು (2)** ಅಂಕಗಳನ್ನು ಹೊಂದಿದೆ. **ಎಲ್ಲಾ** ಪ್ರಶ್ನೆಗಳನ್ನೂ **ಕಡ್ಡಾಯವಾಗಿ** ಉತ್ತರಿಸಬೇಕು.

**1.** ಉನ್ನತ ಶಿಕ್ಷಣ ಪಡೆದಂತಹ ನಾಗರಿಕರಿಗೆ ''ಬಹುಮತದಾನವನ್ನು'' ಪ್ರತಿಪಾದಿಸಿದ ರಾಜಕೀಯ ಚಿಂತಕರು ಯಾರು ?

(A) ಜೆ. ಬೆಂಥಮ್

(B) ಜೆ.ಎಸ್. ಮಿಲ್

(C) ಜೆ.ಜೆ. ರೂಸೊ

(D) ಟಿ.ಎಚ್. ಗ್ರೀನ್

**2.** ಹಾಬ್ಸ್‌ರವರ ಪ್ರಕಾರ ಜನರು ನೈಸರ್ಗಿಕ ಸ್ಥಿತಿಯನ್ನು ತ್ಯಜಿಸಿ ಒಪ್ಪಂದದ ಮೂಲಕ ಪ್ರಭುತ್ವವನ್ನು ನಿರ್ಮಿಸಿಕೊಂಡರು. ಈ ಒಪ್ಪಂದವು ಯಾರಿಂದ ಮಾಡಿಕೊಳ್ಳಲಾಯಿತೆಂದರೆ

(A) ವ್ಯಕ್ತಿಗಳಿಂದ

(B) ಸಮಾಜದ ವಿವಿಧ ಗುಂಪುಗಳಿಂದ

(C) ವ್ಯಕ್ತಿ ಮತ್ತು ಸಾರ್ವಭೌಮರಿಂದ

(D) ವಿವಿಧ ಸಮುದಾಯದವರಿಂದ

**3.** ''ಎಲ್ಲಿ ಕಾನೂನು ಇರುವುದಿಲ್ಲವೋ, ಅಲ್ಲಿ ಸ್ವಾತಂತ್ರ್ಯ ಇರುವುದಿಲ್ಲ'' ಇದನ್ನು ಯಾರು ಹೇಳಿದರು ?

(A) ಟಿ.ಎಚ್. ಗ್ರೀನ್

(B) ಜಾನ್ ಲಾಕ್

(C) ಥಾಮಸ್ ಹಾಬ್ಸ್

(D) ಕಾರ್ಲ ಮಾರ್ಕ್ಸ್

**4.** ಜಾನ್ ಲಾಕ್‌ರ ಪ್ರಕಾರ ಈ ಕೆಳಗಿನವುಗಳಲ್ಲಿ ಯಾವುದು ನೈಸರ್ಗಿಕ ಹಕ್ಕು ಅಲ್ಲ?

(A) ಸ್ವಾತಂತ್ರ್ಯ

(B) ಜೀವಿಸುವ

(C) ಆಸ್ತಿ

(D) ಸಮಾನತೆ

**5.** ಈ ಕೆಳಗಿನವುಗಳಲ್ಲಿ ಯಾವುದು 'ಗುಂಪು ನಿಗದಿತ ಹಕ್ಕಿಗೆ' ಉದಾಹರಣೆಯಲ್ಲ?

(A) ಕಾರ್ಪೊರೇಟ್ ಹಕ್ಕು

(B) ಸ್ವಯಂ–ಸರ್ಕಾರದ ಹಕ್ಕು

(C) ವಿಶೇಷ ಪ್ರತಿನಿಧಿತ್ವದ ಹಕ್ಕು

(D) ಬಹು ಜನಾಂಗೀಯ ಹಕ್ಕು

**6.** ಮಹಿಳಾವಾದಿಗಳ ಅತ್ಯಂತ ಪ್ರಸಿದ್ಧ ಘೋಷಣೆಯೆಂದರೆ ವೈಯಕ್ತಿಕವಾಗಿರುವುದು.

(A) ರಾಜಕೀಯವಾದುದಾಗಿದೆ

(B) ಸಾಮಾಜಿಕವಾದುದಾಗಿದೆ

(C) ವಿಮೋಚನಾದಾಯಕವಾಗಿದೆ

(D) ಸ್ತ್ರೀಯತ್ವವಾಗಿದೆ

# POLITICAL SCIENCE

## PAPER – III

**Note :** This paper contains **seventy-five (75)** objective type questions. **Each** question carries **two (2)** marks. **All** questions are **compulsory**.

**1.** Which political thinker advocated "Plural Voting" to the higher educated citizen ?

(A) J. Bentham

(B) J.S. Mill

(C) J.J. Rousseau

(D) T.H. Green

**2.** According to Hobbes people left the state of nature and created state through a contract. This contract was concluded by

(A) the individuals

(B) the various groups of society

(C) the individual and the sovereign

(D) various communities

**3.** Who said, "Where there is no law, there is no freedom" ?

(A) T.H. Green

(B) John Locke

(C) Thomas Hobbes

(D) Karl Marx

**4.** Which one of the following, according to John Locke, is not a natural right ?

(A) Liberty

(B) Life

(C) Property

(D) Equality

**5.** Which of the following is not an example of a group-specific right ?

(A) Corporate rights

(B) Self-government right

(C) Special representation right

(D) Polyethnic right

**6.** A well known feminist slogan is that the personal is

(A) Political

(B) Social

(C) Liberating

(D) Feminine

7. ಭಾರತೀಯ ರೈಲ್ವೆಯ ಆಧುನೀಕರಣದ ಒಪ್ಪಂದಕ್ಕೆ ಯಾವ ಎರಡು ರಾಷ್ಟ್ರಗಳು ಸಹಿ ಮಾಡಿದವು ?
   (A) ಭಾರತ ಮತ್ತು ಅಮೇರಿಕಾ
   (B) ಭಾರತ ಮತ್ತು ಬೆಲ್ಜಿಯಂ
   (C) ಭಾರತ ಮತ್ತು ಅಫಘಾನಿಸ್ತಾನ
   (D) ಭಾರತ ಮತ್ತು ಚೀನಾ

8. ಯಾವ ಪ್ರಧಾನ ಮಂತ್ರಿಯು ಟರ್ಕಿ ದೇಶದ ಮೊದಲ ಚುನಾಯಿತ ಅಧ್ಯಕ್ಷರಾಗಿದ್ದಾರೆ ?
   (A) ತಯ್ಯಿಪ್ ಎರ್ಡೋಗೋನ್
   (B) ಅಬ್ದುಲ್ ಗುಲ್
   (C) ಬುಲೆಂಟ್ ಎಕೆವಿಟ್
   (D) ಅಬ್ದುಲ್ಲಾ ಅಬ್ದುಲ್ಲಾ

9. ಕೆಳಗಿನವರಲ್ಲಿ ಯಾರು ಸಾಂಪ್ರದಾಯಿಕ ಹಕ್ಕುಗಳ ವಿಷಯವನ್ನು ಪ್ರತಿಪಾದಿಸಿದರು ?
   (A) ಸಿಸಿರೋ
   (B) ಎಚ್.ಜೆ. ಲಾಸ್ಕಿ
   (C) ರಿಚ್ಚೆ
   (D) ಜೆ.ಎಸ್. ಮಿಲ್

10. ಪ್ರತಿಯೊಬ್ಬ ಮನುಷ್ಯನಿಗೆ ಜೀವನದಲ್ಲಿ ಸಮಾನವಾದ ಸಾಧ್ಯತೆಗಳಿವೆ, ಎಂಬುದನ್ನು ಹೀಗೆ ಕರೆಯಬಹುದು.
   (A) ಪರಿಣಾಮದಲ್ಲಿ ಸಮಾನತೆ
   (B) ಸಮಾನವಾದ ಅವಕಾಶಗಳು
   (C) ರಾಜಕೀಯ ಸಮಾನತೆ
   (D) ಸಾಮಾಜಿಕ ವ್ಯವಸ್ಥೆ

11. ಈ ಕೆಳಗಿನವುಗಳಲ್ಲಿ ಯಾವುದು ಮುಕ್ತವಾದ ಉದ್ದಿಮೆಗೆ ಅನುಕೂಲಕರ ವಾತಾವರಣ ಒದಗಿಸುತ್ತದೆ.
   (A) ಸಮತಾವಾದ
   (B) ಸಮಾಜವಾದ
   (C) ಬಂಡವಾಳಶಾಹಿ
   (D) ಏಕಾತ್ಮಕತೆ

12. ಈ ಕೆಳಗಿನ ಯಾವ ಚಿಂತಕರು ಮೊದಲ ಬಾರಿಗೆ 'ವಿತರಣಾ ನ್ಯಾಯ'ವನ್ನು ಅಭಿವೃದ್ಧಿಪಡಿಸುವಲ್ಲಿ ಕಾರಣೀಭೂತರಾದರು.
   (A) ಪ್ಲೇಟೋ
   (B) ಅರಿಸ್ಟಾಟಲ್
   (C) ಮೆಕೆವೆಲ್ಲಿ
   (D) ಜಾನ್ ಲಾಕ್

13. ಈ ಕೆಳಗಿನಲ್ಲಿ ಯಾರನ್ನು ವಿಲ್ಸೋನಿಯನ್ ವಾದಿಗಳೆಂದು ಕರೆಯಲಾಗಿದೆ ?
   (A) ವಾಸ್ತವವಾದಿಗಳು
   (B) ಆದರ್ಶವಾದಿಗಳು
   (C) ನವ–ವಾಸ್ತವವಾದಿಗಳು
   (D) ನವ–ಸಾಂಪ್ರದಾಯಿಕವಾದಿಗಳು

14. ಈ ಕೆಳಗಿನ ಯಾವುದು ವರ್ತನಾವಾದದ ಲಕ್ಷಣವು ತಪ್ಪಾಗಿ ಪಟ್ಟಿ ಮಾಡಲಾಗಿದೆ ?
   (A) ಇದು ನೈತಿಕ ಮೌಲ್ಯಗಳಿಗೆ ಒತ್ತು ಕೊಡುತ್ತದೆ
   (B) ಇದು ಮಾನವನ ವರ್ತನೆಯ ಅಧ್ಯಯನಕ್ಕೆ ಒತ್ತು ಕೊಡುತ್ತದೆ
   (C) ಇದು ವೈಯಕ್ತಿಕ ಗುಂಪುಗಳ ಅಧ್ಯಯನಕ್ಕೆ ಒತ್ತು ಕೊಡುತ್ತದೆ
   (D) ಇದು ವಸ್ತು ನಿಷ್ಠತೆಗೆ ಒತ್ತು ಕೊಡುತ್ತದೆ

**7.** Modernisation of Indian Railway's Agreement is signed by which two countries ?

(A) India and the US

(B) India and Belgium

(C) India and Afghanistan

(D) India and China

**8.** Which Prime Minister of Turkey becomes the nations first directly elected President ?

(A) Tayyip Erdogan

(B) Abdul Gul

(C) Bulent Ecevit

(D) Abdullah Abdullah

**9.** Who among the following championed the cause of the customery rights ?

(A) Cicero

(B) H.J. Laski

(C) Ritche

(D) J.S. Mill

**10.** Each person having the same chance to succeed in life is called

(A) equality of outcome

(B) equality of opportunity

(C) political equality

(D) social order

**11.** Which of the following offers the most favourable climate for free enterprise ?

(A) communism

(B) socialism

(C) capitalism

(D) totalitarianism

**12.** Who among the following thinkers is credited with developing the concept of 'distributive justice' for the first time ?

(A) Plato

(B) Aristotle

(C) Machiavelli

(D) John Locke

**13.** Which among the following were called "Wilsonianism" ?

(A) Realist

(B) Idealist

(C) Neo-Realist

(D) Neo-conservatives

**14.** Which one of the following feature of behaviouralism has been wrongly listed ?

(A) It lays emphasis on ethical values

(B) It lays emphasis on the study of human behaviour

(C) It lays emphasis on the study of individual groups

(D) It lays emphasis on objectivity

**15.** ಮಾರ್ಕ್ಸ್‌ನ ಪ್ರಕಾರ ಪ್ರೊಲಿಟೇರಿಯೇಟ್‌ನ ಸರ್ವಾಧಿಕಾರವು ಏನನ್ನು ಸೂಚಿಸುತ್ತದೆ ?

(A) ಆದರ್ಶವಾದಿ ಪ್ರಭುತ್ವ

(B) ಪರಿವರ್ತನಾ ಹಂತದ ಪ್ರಭುತ್ವ

(C) ನಿರಂಕುಶ ಪ್ರಭುತ್ವ

(D) ಉದಾರವಾದಿ ಪ್ರಭುತ್ವ

**16.** ಈ ಕೆಳಗಿನ ಯಾವ ಮಾರ್ಕ್ಸಿಸ್ಟ್ ಚಿಂತಕರನ್ನು ಒಬ್ಬ ಅಪ್ಪಟ ಮಾರ್ಕ್ಸ್‌ವಾದಿ ಚಿಂತಕರೆಂದು ಕರೆಯಲಾಗಿದೆ ?

(A) ಗ್ರಾಮ್ಸ್ಕಿ

(B) ಲೆನಿನ್

(C) ಕೌಟ್ಸ್ಕಿ

(D) ಮಾವೋ

**17.** ಜನರ ರಾಜಕೀಯ ನಡತೆಯನ್ನು ರೂಪಿಸುವ ಧೋರಣೆಗಳ, ಆಚರಣೆಗಳ ಒಂದು ಗುಂಪನ್ನು ವಿವರಿಸುವ ಪದಗುಚ್ಛ ಯಾವುದು ?

(A) ಆಡಳಿತಾರೂಢ ಪಕ್ಷ

(B) ರಾಜಕೀಯ ಪಕ್ಷ

(C) ಸಾಮಾಜಿಕ ಸಂಸ್ಕೃತಿ

(D) ರಾಜಕೀಯ ಸಂಸ್ಕೃತಿ

**18.** ನೈಸರ್ಗಿಕ ಸ್ಥಿತಿಯಿಂದ ತಮ್ಮ ನೈಸರ್ಗಿಕ ಹಕ್ಕುಗಳನ್ನು ವ್ಯಕ್ತಿಯು ರಾಜ್ಯದೊಳಗೆ ಒಯ್ಯುತ್ತಾನೆ ಎಂಬುದನ್ನು ಈ ಕೆಳಕಂಡವರಲ್ಲಿ ಯಾರು ತಿಳಿಸುತ್ತಾರೆ ?

(A) ರೂಸೋ

(B) ಪ್ಲೇಟೋ

(C) ಲಾಕ್

(D) ಮಾರ್ಕ್ಸ್

**19.** ಪ್ರತಿಪಾದನೆ (A) ಮತ್ತು ಮತ್ತೊಂದನ್ನು ಕಾರಣ (R) ಎಂದು ನಮೂದಿಸಿದೆ.

ಈ ಕೆಳಕಂಡ ಎರಡು ಹೇಳಿಕೆಗಳಲ್ಲಿ ಒಂದನ್ನು

**ಪ್ರತಿಪಾದನೆ (A)** : ಚರ್ಚ್ ಮತ್ತು ಪ್ರಭುತ್ವದ ವಾಗ್ವಾದದಲ್ಲಿ ರಾಜನು ಸೆಕ್ಯೂಲರ್ ಪ್ರಭುತ್ವದ ಮೇಲೆ ಮಾತ್ರ ಆಳ್ವಿಕೆಯನ್ನು ಸ್ಥಾಪಿಸಲಿಲ್ಲ. ಚರ್ಚಿನ ಆಧ್ಯಾತ್ಮಿಕ ಆಳ್ವಿಕೆಯನ್ನು ಸಹಾ ಅತಿಕ್ರಮಿಸಿದನು.

**ಕಾರಣ (R)** : ಚರ್ಚಿನ ಅಧಿಕಾರವನ್ನು ಕಡೆಗಣಿಸುವ ಉದ್ದೇಶ ಅದಕ್ಕಿತ್ತು.

ಮೇಲಿನ ಈ ಹೇಳಿಕೆಗಳ ಹಿನ್ನಲೆಯಲ್ಲಿ ಕೆಳಗಿನ ಯಾವ ಉತ್ತರ ಸರಿಯಾಗಿದೆ ?

(A) (A) ಮತ್ತು (R) ಎರಡೂ ಸರಿ ಮತ್ತು (R) ಎನ್ನುವುದು (A) ಯ ಸರಿಯಾದ ವಿವರಣೆಯಾಗಿದೆ

(B) (A) ಮತ್ತು (R) ಎರಡೂ ಸರಿ ಆದರೆ (R) ಎಂಬುದು (A) ಯ ಸರಿಯಾದ ವಿವರಣೆಯಾಗಿಲ್ಲ

(C) (A) ಮತ್ತು (R) ಎರಡೂ ತಪ್ಪು

(D) (A) ಸರಿ (R) ತಪ್ಪು

**15.** According to Marx 'The Dictatorship of the proletariat' signifies

(A) An Ideal State

(B) A Transitional State

(C) An Autocratic State

(D) A Liberal State

**16.** Who among the following Marxist thinkers has been described as 'a genius theoretician'

(A) Gramsci

(B) Lenin

(C) Kautsky

(D) Mao

**17.** What term describes a set of attitudes and practices that shapes people's political behaviour ?

(A) Governing party

(B) Political party

(C) Social culture

(D) Political culture

**18.** Who among the following maintains that persons carried into the state their natural rights from the state of nature ?

(A) Rousseau

(B) Plato

(C) Locke

(D) Marx

**19.** Given below are two statements, one labeled as Assertion (A) and the other labeled as Reason (R).

**Assertion (A)** : In the Church-State controversy the Monarch not only ruled the secular state but also encroached upon the spiritual rule of the Church.

**Reason (R)** : It was meant to denounce the authority of the Church.

In the context of the two statement which one of the following correct ?

(A) Both (A) and (R) are correct and (R) is the correct explanation of (A)

(B) (A) and (R) both are correct (R) is not the explanation of (A)

(C) Both (A) and (R) are incorrect

(D) (A) is correct (R) is incorrect

**20. ಪ್ರತಿಪಾದನೆ(A) :** ಉದಾರವಾದ ಆಧುನಿಕ ಸಮಾಜಗಳ ಸಮುದಾಯವನ್ನು ಅಪಮೌಲ್ಯಗೊಳಿಸುತ್ತದೆ ಎಂದು ಸಮುದಾಯವಾದಿಗಳು ವಾದಿಸುತ್ತಾರೆ.

**ಕಾರಣ (R) :** ಇದು ಆಧುನಿಕ ಉದಾರವಾದಿ ಸಮಾಜಗಳ ತೃಣೀಕರಿಸುವ ಧೋರಣೆಗಳಿಗೆ ಸಂಬಂಧಿಸಿದ ಋಣಾತ್ಮಕ ಸಾಮಾಜಿಕ ಪರಿಣಾಮಗಳನ್ನು ಅಲಕ್ಷಿಸುತ್ತದೆ.

(A) (A) ಮತ್ತು (R) ಎರಡೂ ಸರಿ ಮತ್ತು (R) ಎಂಬುದು(A) ಯ ಸರಿಯಾದ ವಿವರಣೆಯಾಗಿದೆ

(B) (A) ಮತ್ತು (R) ಎರಡೂ ಸರಿ, ಆದರೆ (R) ಎಂಬುದು(A) ಯ ಸರಿಯಾದ ವಿವರಣೆಯಾಗಿಲ್ಲ

(C) (A) ತಪ್ಪು (R) ಸರಿ

(D) (A) ಮತ್ತು (R) ಎರಡೂ ತಪ್ಪು

**21. ಪ್ರತಿಪಾದನೆ(A) :** ಗ್ರಾಮ್ಸ್‌ಕಿಯು ಸಾಮಾನ್ಯಜ್ಞಾನವನ್ನು ಒಳ್ಳೆಯ ಜ್ಞಾನದಿಂದ ಪ್ರತ್ಯೇಕಿಸುವುದನ್ನು ವಿರೋಧಿಸುತ್ತಾನೆ.

**ಕಾರಣ (R) :** ಸಾಮಾನ್ಯಜ್ಞಾನವು ಸಂಪೂರ್ಣವಾಗಿ ತಪ್ಪಾಗಿರಬಹುದಾಗಿದೆ ಮತ್ತು ಒಳ್ಳೆಯ ಜ್ಞಾನವು ಸತ್ಯಕ್ಕೆ ಹತ್ತಿರವಾದುದಾಗಿದೆ.

(A) (A) ಸರಿ (R) ತಪ್ಪು

(B) (A) ತಪ್ಪು(R) ಸರಿ

(C) (A) ಸರಿ ಮತ್ತು (R) ಎಂಬುದು (A) ಯ ಸರಿಯಾದ ವಿವರಣೆಯಾಗಿದೆ

(D) (A) ಮತ್ತು (R) ಎರಡೂ ತಪ್ಪು

**22. ಪ್ರತಿಪಾದನೆ(A) :** ನಡವಳಿಕಾವಾದವು ಸಾಂಪ್ರದಾಯಿಕ ದೃಷ್ಟಿಕೋನಗಳಿಗೆ ಪ್ರತಿರೋಧವಾಗಿ ಹೊರಹೊಮ್ಮಿದೆ.

**ಕಾರಣ (R) :** ರಾಜಕೀಯ ವಿಜ್ಞಾನವು ಹೆಚ್ಚು ವೈಜ್ಞಾನಿಕ ಜ್ಞಾನದ ಹುಡುಕಾಟದಲ್ಲಿತ್ತು.

(A) (A) ಸರಿ (R) ತಪ್ಪು

(B) (A) ತಪ್ಪು ಆದರೆ (R) ಸರಿ

(C) (A) ಮತ್ತು (R) ಎರಡೂ ಸರಿ ಮತ್ತು (R) ಎಂಬುದು(A) ಯ ಸರಿಯಾದ ವಿವರಣೆಯಾಗಿದೆ

(D) (A) ಮತ್ತು (R) ಎರಡೂ ಸರಿ ಆದರೆ (R) ಎಂಬುದು A ಯ ಸರಿಯಾದ ವಿವರಣೆಯಾಗಿಲ್ಲ

**23. ಪ್ರತಿಪಾದನೆ(A) :** ಅನ್ಯಾಯವನ್ನು ಮಾಡುವುದಕ್ಕಿಂತ ಅನ್ಯಾಯಕ್ಕೆ ಒಳಗಾಗುವುದು ಉತ್ತಮ ಎಂದು ಪ್ಲೇಟೋ ವಾದಿಸುತ್ತಾನೆ.

**ಕಾರಣ (R) :** ಅನ್ಯಾಯಕ್ಕೆ ಒಳಗಾಗುವುದು ಮನುಷ್ಯನನ್ನು ಪರಿಪೂರ್ಣಗೊಳಿಸುತ್ತದೆ ಎನ್ನುವುದು ಪ್ಲೇಟೋವಿನ ನಂಬಿಕೆಯಾಗಿತ್ತು.

(A) (A) ತಪ್ಪು (R) ಸರಿ

(B) (A) ಮತ್ತು (R) ಎರಡೂ ತಪ್ಪು

(C) (A) ಮತ್ತು (R) ಎರಡೂ ಸರಿ

(D) (A) ಸರಿ (R) ತಪ್ಪು

20. **Assertion (A)** : Communitarians argued that liberalism devalues community in modern societies.

**Reason (R)** : It reflected the negative social effect related to the atomistic tendencies of modern liberal societies.

(A) Both (A) and (R) correct and (R) is the correct explanation of (A)

(B) Both (A) and (R) correct, but (R) is not the correct explanation of (A)

(C) (A) is incorrect (R) is correct

(D) Both (A) and (R) are incorrect

21. **Assertion (A)** : Gramsci opposed dividing common sense from good sense.

**Reason (R)** : Common sense may turn out to be utterly wrong and good sense is nearer to reality.

(A) (A) is correct (R) is wrong

(B) (A) is wrong but (R) is correct

(C) (A) is correct (R) is correct explanation of (A)

(D) Both (A) and (R) are incorrect

22. **Assertion (A)** : Behaviouralism emerged as a reaction against the traditional approaches.

**Reason (R)** : Political theorists were in search for more scientific knowledge.

(A) (A) is correct (R) is false

(B) (A) is false (R) is correct

(C) Both (A) and (R) are correct and (R) is the correct explanation of (A)

(D) Both (A) and (R) are correct but (R) is not the correct explanation of (A)

23. **Assertion (A)** : Plato argued that it is better to suffer injustice than to do it.

**Reason (R)** : Plato strongly believed the suffering in justice makes man perfect

(A) (A) is not correct (R) is correct

(B) Both (A) and (R) are false

(C) Both (A) and (R) are correct

(D) (A) is correct (R) is false

**24. ಪ್ರತಿಪಾದನೆ(A)** : ಸಂವಿಧಾನಾತ್ಮಕವಾದವು ಒಂದು ಚಿಂತನೆಯಾಗಿ ಜಾನ್‌ಲಾಕ್‌ನೊಂದಿಗೆ ಗುರುತಿಸಲ್ಪಟ್ಟಿದೆ.

**ಕಾರಣ (R)** : ಜಾನ್ ಲಾಕ್ ಪ್ರಜಾಪ್ರಭುತ್ವವಲ್ಲದ ಸರ್ಕಾರಗಳ ಕಟು ಟೀಕಾಕಾರನಾಗಿದ್ದನು.

ಮೇಲಿನ ಈ ಹೇಳಿಕೆಗಳ ಹಿನ್ನಲೆಯಲ್ಲಿ ಕೆಳಗಿನ ಯಾವ ಉತ್ತರ ಸರಿಯಾಗಿದೆ ?

(A) (A) ಮತ್ತು(R) ಎರಡೂ ಸರಿ ಮತ್ತು(R) ಎಂಬುದು (A) ಯ ಸರಿಯಾದ ವಿವರಣೆಯಾಗಿದೆ

(B) (A) ಮತ್ತು(R) ಎರಡೂ ಸರಿ ಆದರೆ, (R) ಎಂಬುದು (A) ಯ ಸರಿಯಾದ ವಿವರಣೆಯಾಗಿಲ್ಲ

(C) (A) ಸರಿ (R) ತಪ್ಪು

(D) (A) ಮತ್ತು (R) ಎರಡೂ ತಪ್ಪು

**25. ಪ್ರತಿಪಾದನೆ(A)** : ಏಕಸ್ವಾಮ್ಯ ಬಂಡವಾಳಶಾಹಿ ವಾದದ ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳಲು ಲೆನಿನ್ ಸಾಮ್ರಾಜ್ಯಶಾಹಿ ವಾದವನ್ನು ಪ್ರತಿಪಾದಿಸಿದ.

**ಕಾರಣ (R)** : ಮಾರ್ಕ್ಸ್‌ವಾದವನ್ನು ಪರಿಷ್ಕರಣವಾದದ ಒಂದು ಭಾಗವಾಗಿ ಪುನರ್ ರಚಿಸುವ ಉದ್ದೇಶದಿಂದ ಇದನ್ನು ರಚಿಸಲಾಯಿತು.

(A) (A) ಸರಿ ಮತ್ತು (R), (A) ಯ ಸರಿಯಾದ ವಿವರಣೆಯಾಗಿದೆ

(B) (A) ಸರಿ, ಆದರೆ (R), (A) ಯ ಸರಿಯಾದ ವಿವರಣೆಯಲ್ಲ

(C) (A) ತಪ್ಪು(R) ಸರಿ

(D) (A) ಮತ್ತು (R) ಎರಡೂ ತಪ್ಪು

**26. ಪ್ರತಿಪಾದನೆ(A)** : ಹೆಚ್ಚು ದೇಶಗಳು ಪ್ರಜಾಪ್ರಭುತ್ವ ದೇಶಗಳಾದರೆ, ಅದು ವಿಶ್ವಶಾಂತಿಗೆ ಒಂದು ಮಾರ್ಗವಾಗುತ್ತದೆ ಎನ್ನುವುದು ಕಾಂಟ್‌ನ ನಂಬಿಕೆ ಆಗಿದೆ.

**ಕಾರಣ (R)** : ಪ್ರಜಾಪ್ರಭುತ್ವ ದೇಶಗಳು ತಮ್ಮೊಳಗೆ ಹೊಡೆದಾಡಿಕೊಳ್ಳುವ ಸಾಧ್ಯತೆಗಳು ಕಡಿಮೆ.

(A) (A) ಮತ್ತು(R) ಎರಡೂ ಸರಿ ಮತ್ತು(R), (A) ಯ ಸರಿಯಾದ ವಿವರಣೆ

(B) (A) ಮತ್ತು (R) ಎರಡೂ ಸರಿ, ಆದರೆ (R), (A) ಯ ಸರಿಯಾದ ವಿವರಣೆಯಲ್ಲ

(C) (A) ತಪ್ಪು ಆದರೆ (R) ಸರಿ

(D) (A) ಮತ್ತು (R) ಎರಡೂ ತಪ್ಪು

**27.** ಅಮೇರಿಕಾ ಸಂಯುಕ್ತ ಸಂಸ್ಥಾನವನ್ನು ಯಾವುದೇ ಒಂದು ಗಣ್ಯರ ಗುಂಪು ನಿಯಂತ್ರಿಸಲಾಗಲಿಲ್ಲ ಏಕೆಂದರೆ ಅಲ್ಲಿ ವೈವಿಧ್ಯಮಯ ಗುಂಪುಗಳು ಮತ್ತು ಹಿತಾಸಕ್ತಿಗಳಿವೆ ಎಂದು ರಾಬರ್ಟ್ ದಾಲ್ ವಾದಿಸುತ್ತಾರೆ ಅವರ ಈ ಸಿದ್ಧಾಂತ ಈ ಕೆಳಗಿನ ಯಾವುದಾಗಿದೆ ?

(A) ಬಹುತ್ವವಾದ

(B) ಗಣ್ಯವಾದ

(C) ಅಧಿಕಾರಶಾಹಿ ಸಿದ್ಧಾಂತ

(D) ಜನಪ್ರಿಯವಾದ

24. **Assertion (A)** : Constitutionalism as an idea is identified with John Locke.

**Reason (R)** : John Locke was highly critical of non-democratic government.

In the context of the above statements, which among the following is correct ?

(A) Both (A) and (R) are true and (R) is the correct explanation of (A)

(B) Both (A) and (R) are true but (R) is not the correct explanation of (A)

(C) (A) is correct but (R) is false

(D) Both (A) and (R) are false

25. **Assertion (A)** : Lenin advocated imperialism to understand the growth of monopoly capitalism.

**Reason (R)** : It was to reformulate Marxism as part of revisionism.

(A) (A) is correct and (R) is the correct explanation of (A)

(B) (A) is correct but (R) is not the correct explanation of (A)

(C) (A) is not correct (R) is correct

(D) Both (A) and (R) are incorrect

26. **Assertion (A)** : Kant believed that if more countries become democratic it would lead to world peace.

**Reason (R)** : Democratic countries have fewer chances of fighting with each other.

(A) Both (A) and (R) are true (R) is the correct explanation of (A)

(B) Both (A) and (R) are true but (R) is not the correct explanation of (A)

(C) (A) is wrong but (R) is true

(D) Both (A) and (R) are wrong

27. Robert Dahl argued that a single elite could never control the United States because of the diversity of groups and interests here. This theory is called

(A) pluralism

(B) elitism

(C) bureaucratic theory

(D) populism

**28.** ನಿಸರ್ಗದ ಭಾಗವಾಗಿರುವ ಮತ್ತು ವಿವೇಚನೆಗೊಳಪಡುವ ನೈತಿಕ ತತ್ವಗಳ ಆಳ್ವಿಕೆಗೆ ಸಮಾಜವು ಒಳಪಡಬೇಕು ಎನ್ನುವ ತತ್ವವನ್ನು ಏನೆಂದು ಕರೆಯುತ್ತಾರೆ ?

(A) ನೈತಿಕ ಕಾನೂನು

(B) ಒಪ್ಪಂದ ಕಾನೂನು

(C) ನೈಸರ್ಗಿಕ ಕಾನೂನು

(D) ಅರಾಜಕ ಕಾನೂನು

**29.** ಈ ಕೆಳಗಿನವುಗಳಲ್ಲಿ ಯಾವುದು ಏಷಿಯಾ ಉತ್ಪಾದನಾ ವಿಧಾನದ ಗುಣಲಕ್ಷಣವಲ್ಲ ?

(A) ನಿರಂಕುಶ ಆಳುವ ಗುಂಪು

(B) ಭಿನ್ನತೆರಹಿತ ಗ್ರಾಮೀಣ ಸಮುದಾಯ

(C) ಅಭಿವೃದ್ಧಿ ಹೊಂದಿದ ಕೈಗಾರಿಕಾ ವಲಯ

(D) ಸಮುದಾಯಗಳಿಂದ ಮಿಗುತಾಯವನ್ನು ತೆಗೆದುಕೊಳ್ಳುತ್ತದೆ

**30.** ಸರಿಯಾದ ಹೇಳಿಕೆಯನ್ನು ಗುರುತಿಸಿ :

ರಾಜಕೀಯ ವ್ಯವಸ್ಥೆಯ ವಿಧವನ್ನು

(A) ದೇಶದ ಶಾಸಕಾಂಗ ಮತ್ತು ಕಾರ್ಯಾಂಗಗಳ ನಾಯಕತ್ವವು ನಿರ್ಧರಿಸುತ್ತದೆ

(B) ದೇಶದ ರಾಷ್ಟ್ರಾಧ್ಯಕ್ಷರು ಮತ್ತು ಪ್ರಧಾನಮಂತ್ರಿಯವರು ನಿರ್ಧರಿಸುತ್ತಾರೆ

(C) ದೇಶದಲ್ಲಿರುವ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಗಳು ಯಾವ ರೀತಿಯಲ್ಲಿ ಸಂಘಟಿತವಾಗಿದೆ ಎನ್ನುವುದರ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ

(D) ದೇಶದ ರಾಜಕೀಯ ತತ್ವಜ್ಞಾನಿಗಳು ನಿರ್ಧರಿಸುತ್ತಾರೆ

**31.** ರಾಜಕೀಯ ಸಂವಹನದ ಮುಖ್ಯ ಪ್ರತಿಪಾದಕರು ಯಾರು ?

(A) ರಾಬರ್ಟ್ ಸಿ. ನಾರ್ಥ್

(B) ಆರ್ಥರ್ ಬೆಂಟ್ಲಿ

(C) ಕಾರ್ಲ್ ಡ್ಯೂಷ್

(D) ಮಾರ್ಟನ್ ಕಪ್ಲಾನ್

**32.** ಸಜೀವ ಮಂಡಳಿ ಮತ್ತು ನೈಜ ಕಾರ್ಯಾಂಗದ ಮೇಲೆ ಸಂಸತ್ತು, ಹಲವಾರು ರೀತಿಯಲ್ಲಿ ನಿಯಂತ್ರಣವನ್ನು ಹೊಂದಿರುತ್ತದೆ. ಈ ಕೆಳಗಿನ ಯಾವ ಒಂದು ವಿಧ–ಕಾರ್ಯಾಂಗದ ಮೇಲಿನ ಹಿಡಿತವನ್ನು ತಪ್ಪಾಗಿ ಪ್ರತಿಬಿಂಬಿಸುತ್ತದೆ ?

(A) ಪೂರಕ ಪ್ರಶ್ನೆಗಳು

(B) ಪ್ರಶ್ನೆಗಳು

(C) ಮುಂದೂಡುವಿಕೆಯ ಗೊತ್ತುವಳಿ

(D) ಸಂಸತ್ತಿನ ಜಂಟಿ ಸಮಾವೇಶ

**33.** ಪ್ರಮಾಣಾನುಪಾತ ಪ್ರಾತಿನಿಧ್ಯ ವ್ಯವಸ್ಥೆಯಲ್ಲಿ

(A) ಅಲ್ಪಸಂಖ್ಯಾತರು ಅವರ ಸಂಖ್ಯೆಯ ಪ್ರಮಾಣಾನುಗುಣವಾಗಿ ಪ್ರಾತಿನಿಧ್ಯವನ್ನು ಪಡೆಯುತ್ತಾರೆ

(B) ಯಾವುದೇ ವಯಸ್ಸಿನ ಮಿತಿ ಇಲ್ಲದೇ ಪ್ರಾತಿನಿಧ್ಯವನ್ನು ನೀಡಲಾಗುತ್ತದೆ

(C) ಅಲ್ಪ ಸಂಖ್ಯಾತರ ಗುಂಪಿಗೆ ಪ್ರಾತಿನಿಧ್ಯವನ್ನು ಕೊಡಲಾಗುತ್ತದೆ

(D) ಇತರರಿಗಿಂತ ಅಲ್ಪ ಸಂಖ್ಯಾತರಿಗೆ ಹೆಚ್ಚು ಮತಗಳನ್ನು ಕೊಡಲಾಗುತ್ತದೆ

**28.** A doctrine that society should be governed by certain ethical principles that are part of nature and can be understood by reason is called

(A) Ethical law

(B) Contract law

(C) Natural law

(D) Anarchic law

**29.** Which among the following is not the characteristics of Asiatic mode of production ?

(A) Despotic ruling clique

(B) Undifferentiated village community

(C) Developed industrial sector

(D) Expropriation of surplus from communities

**30.** Identify the correct statement :

The type of political system

(A) is determined by the head of the legislative and executive branches of a country

(B) is determined by the President and Prime Minister of a country

(C) is determined by the way in which legislative, executive and judicial branches are organised in a country

(D) is determined by the political philosophers of a country

**31.** The chief exponent of the political communication is

(A) Robert C. North

(B) Arthur Bentley

(C) Karl Deutsche

(D) Mortan Kaplan

**32.** The parliament exercises control over council of ministers, the real executive in several ways. Which one of the following has been wrongly listed as a method of control over executive ?

(A) Supplementary questions

(B) Questions

(C) Adjournment motions

(D) Joint session of the parliament

**33.** Under proportional representation system

(A) The minorities get representation in proportion to their strength

(B) Representation is given without any age limit

(C) Representation given to minority groups

(D) Minorities are given more votes than others

**34.** ಈ ಕೆಳಕಂಡವುಗಳಲ್ಲಿ ಯಾವುದರಲ್ಲಿ ಕಾರ್ಲ್ ಮಾರ್ಕ್ಸ್‌ರವರು ವಿವರಣೆ ನೀಡಿದ ಪ್ರಾಚೀನ ಭಾರತದ ಸಮಾಜ ಹಾಗೂ ಆರ್ಥಿಕತೆಯನ್ನು ಕಂಡುಕೊಳ್ಳಬಹುದು ?

(A) ಹೆಚ್ಚುವರಿ ಮೌಲ್ಯ ಸಿದ್ಧಾಂತದ ಪರಿಕಲ್ಪನೆಯಲ್ಲಿ

(B) ಏಷ್ಯಾ ಉತ್ಪಾದನೆಯ ವಿಧಾನದಲ್ಲಿ

(C) ವರ್ಗ ಕಲಹದ ವಿವರಣೆಯಲ್ಲಿ

(D) ಚರಿತ್ರೆಯ ಭೌತಿಕ ವ್ಯಾಖ್ಯಾನದಲ್ಲಿ

**35.** ಡೇವಿಡ್ ಈಸ್ಟನ್‌ರವರ ಪ್ರಕಾರ ರಾಜಕೀಯ ವ್ಯವಸ್ಥೆಯು ಒಳಗೊಳ್ಳುವ(inputs) ಎರಡು ಅಂಶಗಳು ಯಾವುವು ?

(A) ಒತ್ತಡ ಮತ್ತು ಭ್ರಷ್ಟತೆ

(B) ಬೇಡಿಕೆ ಮತ್ತು ಬೆಂಬಲ

(C) ರಾಜಕೀಯ ಕ್ರಿಯಾ ಸಮಿತಿಗಳು ಮತ್ತು ರಾಜಕೀಯ ಪಕ್ಷಗಳು

(D) ಮತದಾನ ಮತ್ತು ಹಿಂದಕ್ಕೆ ಕರೆಯಿಸಿಕೊಳ್ಳುವುದು

**36.** ಈ ಕೆಳಗಿನವುಗಳಲ್ಲಿ ಯಾವುದು ಪ್ರಮಾಣಾನುಪಾತ ಪ್ರಾತಿನಿಧ್ಯ ವ್ಯವಸ್ಥೆಯ ಅವಗುಣವಲ್ಲ ?

(A) ಒಂದು ಸಂಕೀರ್ಣ ವ್ಯವಸ್ಥೆ

(B) ದ್ವಿಪಕ್ಷ ಪದ್ಧತಿಗೆ ದಾರಿಮಾಡಿಕೊಡುವುದು

(C) ಬಹು ಪಕ್ಷ ಪದ್ಧತಿಗೆ ದಾರಿಮಾಡಿಕೊಡುವುದು

(D) ಸಮ್ಮಿಶ್ರ ಸರ್ಕಾರಕ್ಕೆ ದಾರಿಮಾಡಿಕೊಡುವುದು

**37.** **ಪ್ರತಿಪಾದನೆ(A)** : ಬಡತನವನ್ನು ನಿರ್ಮೂಲನೆ ಮಾಡುವಲ್ಲಿ ಉತ್ತಮ ಆಳ್ವಿಕೆಯು ಏಕೈಕ ಪ್ರಮುಖಾಂಶವಾಗಿದೆ.

**ಕಾರಣ (R)** : ವಿತರಣಾ ನ್ಯಾಯ ಮತ್ತು ಸಾರ್ವಜನಿಕ ಒಳಿತುಗಳ ಪರಿಣಾಮಕಾರಿ ವಿತರಣೆ ಇದರ ಗುರಿಯಾಗಿದೆ.

ಮೇಲಿನ ಈ ಹೇಳಿಕೆಗಳ ಹಿನ್ನಲೆಯಲ್ಲಿ ಕೆಳಗಿನ ಯಾವ ಉತ್ತರ ಸರಿಯಾಗಿದೆ ?

(A) (A) ಮತ್ತು (R) ಎರಡೂ ಸರಿ (R), (A) ಯ ಸರಿಯಾದ ವಿವರಣೆಯಾಗಿದೆ

(B) (A) ಮತ್ತು (R) ಎರಡೂ ಸರಿ ಆದರೆ, (R), (A) ಯ ಸರಿಯಾದ ವಿವರಣೆಯಲ್ಲ

(C) (A) ಸರಿ ಆದರೆ (R) ತಪ್ಪು

(D) (A) ತಪ್ಪು ಆದರೆ (R) ಸರಿ

**38.** ಈ ಕೆಳಗಿನ ಯಾವ ಕಾಲದಲ್ಲಿ ಮತ್ತು ಆ ಕಾಲದ ನಂತರ ಭಾಗವಹಿಸುವಿಕೆ ನಾಯಕತ್ವದ ಶೈಲಿ ಜನಪ್ರಿಯವಾಯಿತು ?

(A) ವ್ಯವಸ್ಥಾ ಸಿದ್ಧಾಂತ

(B) ನಡವಳಿಕಾ ಸಿದ್ಧಾಂತ

(C) ಮಾನವ ಸಂಬಂಧಗಳ ಸಿದ್ಧಾಂತ

(D) ವೈಜ್ಞಾನಿಕ ನಿರ್ವಹಣಾ ಸಿದ್ಧಾಂತ

**34.** In which one of the following do we find Karl Marx's description of the early Indian society and economy

(A) Conception of surplus value

(B) Asiatic mode of production

(C) Class struggle description

(D) Materialistic interpretation of history

**35.** According to David Easton two kinds of political inputs are

(A) Pressure and bribe

(B) Demand and support

(C) Political action committee and political parties

(D) Voting and recall

**36.** Which one of the following is not a demerit of proportional representation system ?

(A) A complex system

(B) Leading to Bi-party system

(C) Leads to multi party system

(D) Leads to coalition government

**37.** **Assertion (A)** : Good governance is the single most important factor in eradicating poverty.

**Reason (R)** : It aims distributive justice and effective delivery of public goods.

In the context of above two statements which among following is correct ?

(A) Both (A) and (R) are true (R) is the correct explanation of (A)

(B) Both (A) and (R) are true but (R) is not the correct explanation of (A)

(C) (A) is true but (R) is false

(D) (A) is false but (R) is true

**38.** Participative style of leadership became popular during and after the era of which one of the following ?

(A) Systems theory

(B) Behavioural theory

(C) Human relations theory

(D) Scientific management theory

**39.** 'ಬಹುರಾಜಾಧಿಪತ್ಯ' (Polyarchy) ಎಂದರೆ

(A) ಜನರು ಚುನಾವಣಾ ವ್ಯವಸ್ಥೆ ಮತ್ತು ಗುಂಪು ಪ್ರಕ್ರಿಯೆ ಈ ಎರಡರಲ್ಲೂ ಕ್ರಿಯಾಶೀಲರಾಗಿರುತ್ತಾರೆ

(B) ಇದು ವ್ಯಕ್ತಿಯನ್ನು ಪ್ರಜಾಪ್ರಭುತ್ವ ಮಾದರಿಯ ಮೂಲ ಘಟಕವಾಗಿ ತೆಗೆದುಕೊಳ್ಳುತ್ತದೆ

(C) ಇದು ಬಹುಸಂಖ್ಯೆಯ ಭಿನ್ನತೆಗಳನ್ನು ಕಡಿಮೆಗೊಳಿಸಿ ಅದಕ್ಕಿಂತಲೂ ಸರಳವಾದ ಪರಿಹಾರವನ್ನು ಕೊಡುತ್ತದೆ

(D) ಜನರು ತಮ್ಮ ಪ್ರತಿನಿಧಿಗಳ ಮೂಲಕ ಆಳ್ವಿಕೆಯಲ್ಲಿ ಭಾಗವಹಿಸಬಹುದು

**40.** **ಪ್ರತಿಪಾದನೆ (A)** : ಸಂಘಟನೆಯ ವ್ಯವಸ್ಥಾ ಸಿದ್ಧಾಂತವು ಸಂಘಟನೆಯ ಶಾಸ್ತ್ರೀಯ ಸಿದ್ಧಾಂತವನ್ನು ತಿರಸ್ಕರಿಸುತ್ತದೆ.

**ಕಾರಣ (R)** : ಸಂಘಟನೆಯು ಪರಿಸರದಿಂದ ಪ್ರತ್ಯೇಕವಾಗಿರುತ್ತದೆ ಎನ್ನುವ ನೆಲೆಯಲ್ಲಿ ಆ ಸಿದ್ಧಾಂತವನ್ನು ತಿರಸ್ಕರಿಸಲಾಗಿದೆ.

ಈ ಮೇಲಿನ ಎರಡೂ ಹೇಳಿಕೆಗಳ ಹಿನ್ನಲೆಯಲ್ಲಿ ಈ ಕೆಳಗಿನವುಗಳಲ್ಲಿ ಯಾವುದು ಸರಿಯಾದ ಉತ್ತರ ?

(A) (A) ಹಾಗೂ (R) ಎರಡೂ ಸತ್ಯ (R), (A) ಯ ಸರಿಯಾದ ವಿವರಣೆ

(B) (A) ಹಾಗೂ (R) ಎರಡೂ ಸತ್ಯ ಆದರೆ, (R), (A) ಯ ಸರಿಯಾದ ವಿವರಣೆಯಲ್ಲ

(C) (A) ಸತ್ಯ ಆದರೆ (R) ಸುಳ್ಳು

(D) (A) ಹಾಗೂ (R) ಎರಡೂ ಸುಳ್ಳು

**41.** ಈ ಕೆಳಗಿನ ಹೇಳಿಕೆಯನ್ನು ಗಮನಿಸಿ.

ಭಾರತದ ಮಹಾಲೆಕ್ಕ ಪರಿಶೋಧಕರ ವಿವಿಧ ವರದಿಗಳನ್ನು ಸಂಬಂಧಪಟ್ಟವರಿಗೆ ಸಲ್ಲಿಸಬೇಕು.

1) ಕೇಂದ್ರ ಹಾಗೂ ರಾಜ್ಯಗಳ ಲೆಕ್ಕಪತ್ರಗಳನ್ನು ಭಾರತದ ರಾಷ್ಟ್ರಪತಿಯವರಿಗೆ ಸಲ್ಲಿಸಲಾಗುತ್ತದೆ

2) ರಾಜ್ಯಗಳಿಗೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ರಾಜ್ಯದ ರಾಜ್ಯಪಾಲರಿಗೆ ಸಲ್ಲಿಸಲಾಗುತ್ತದೆ

3) ರಾಜ್ಯಗಳಿಗೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ಕೇಂದ್ರ ವಿತ್ತ ಸಚಿವರಿಗೆ ಸಲ್ಲಿಸಲಾಗುತ್ತದೆ

ಈ ಮೇಲಿನ ಯಾವ ಹೇಳಿಕೆಗಳು ಸರಿಯಾಗಿವೆ ?

(A) 1 ಮಾತ್ರ

(B) 2 ಮಾತ್ರ

(C) 3 ಮಾತ್ರ

(D) 1 ಹಾಗೂ 3

**42.** ಕಾರ್ಯನಿರ್ವಹಣಾ ಆಯವ್ಯಯವು ಈ ಕೆಳಕಂಡ ಯಾವುದರ ಮೇಲೆ ಅವಲಂಬಿತವಾಗಿದೆ ?

(A) ವೆಚ್ಚದ ಕಲಮುಗಳು

(B) ಬಂಡವಾಳ ಹೂಡಿಕೆಯ ಕಲಮುಗಳು

(C) ವೆಚ್ಚದ ಉದ್ದೇಶಗಳು

(D) ಅನುಷ್ಠಾನದ ಯೋಜನೆ

**39.** 'Polyarchy' means

(A) People act both through the electoral system and the group process

(B) It takes individual as the basic unit of democratic model

(C) It reduces the multitudinous differences to relatively simple alternatives

(D) People can participate in governance through their representatives

**40.** **Assertion (A)** : System theory of organization rejected classical theory of organization.

**Reason (R)** : It rejected on the ground that organization is independent of the environment.

In the context of the above two statements which among the following is correct ?

(A) Both (A) and (R) are true (R) is the correct explanation of (A)

(B) Both (A) and (R) are true but (R) is not the correct explanation of (A)

(C) (A) is true but (R) is false

(D) Both (A) and (R) are false

**41.** Consider the following statements : Comptroller and Auditor General of India has to submit reports to the concerned authority. Report

1) Relating to accounts of the Union and accounts of States are submitted to President of India

2) Relating to accounts of States are submitted to the Governor of the State

3) Relating to accounts of States are submitted to the Union Minister of Finance

Which of the statements given above is correct ?

(A) 1 only

(B) 2 only

(C) 3 only

(D) 1 and 3

**42.** Performance budgeting is based on

(A) Items of expenditure

(B) Items of investment

(C) Objectives of expenditure

(D) Plan of implementation

**43. ಪ್ರತಿಪಾದನೆ(A) :** ನಿಯೋಜನೆಯು ದ್ವಿಮುಖ ಹೊಣೆಗಾರಿಕೆಗೆ ದಾರಿಮಾಡಿಕೊಡುತ್ತದೆ

**ಕಾರಣ (R) :** ಅಧೀನ ಅಧಿಕಾರಿಗಳು ಅವರಿಗೆ ವಹಿಸಲ್ಪಟ್ಟ ಕಾರ್ಯಗಳನ್ನು ನಿರ್ವಹಿಸಿದರೆ, ನಿಯೋಜನೆಗೊಳಿಸುವ ಅವರ ಮೇಲಿನ ಅಧಿಕಾರಿಯು ಆ ಕೆಲಸವನ್ನು ಮಾಡಿಸುವ ಜವಾಬ್ದಾರಿ ಹೊಂದಿರುತ್ತಾನೆ.

(A) (A) ಮತ್ತು (R) ಎರಡೂ ಸರಿ (R), (A) ಯ ಸರಿಯಾದ ವಿವರಣೆ

(B) (A) ಮತ್ತು (R) ಎರಡೂ ಸರಿ (R), (A) ಯ ಸರಿಯಾದ ವಿವರಣೆಯಲ್ಲ

(C) (A) ತಪ್ಪು (R) ಸರಿ

(D) (A) ಸರಿ ಮತ್ತು (R) ತಪ್ಪು

**44.** ರಾಜಕೀಯ ಆಡಳಿತ ದ್ವಂದ್ವದ ಪರಿಕಲ್ಪನೆಯನ್ನು ಮೊದಲಿಗೆ ಕೊಟ್ಟವರು ಯಾರು ?

(A) ಫ್ರಾಂಕ್ ಹೆನ್ರಿ ಗುಡ್‌ನೌ

(B) ಜೇಮ್ಸ್ ಡಬ್ಲ್ಯೂ. ಫೆಸ್ಲರ್

(C) ಡಬ್ಲೂ ಪಾಲ್ ಆಪ್ಲಬಿ

(D) ಆರ್ಡ್‌ವೇ ಟೆಡ್

**45. ಪ್ರತಿಪಾದನೆ(A) :** ಜಾಗತೀಕರಣವು ಸರ್ಕಾರವನ್ನು ''ಒಂದು ಉದ್ಯಮಶೀಲ ಸರ್ಕಾರ'' ಎಂದು ಸರ್ಕಾರವನ್ನು ಪುನರ್ ವ್ಯಾಖ್ಯಾನಿಸುವುದಕ್ಕೆ ಕಾರಣವಾಗಿದೆ.

**ಕಾರಣ (R) :** ಇದು ಸರ್ಕಾರವನ್ನು ಕಡಿಮೆ ಅಧಿಕಾರದೊಂದಿಗೆ ಪುನರ್ ಆವಿಷ್ಕರಿಸುವ ಮತ್ತು ನವ ಸಾರ್ವಜನಿಕ ನಿರ್ವಾಹಣೆಯ ರಚನೆಯ ಭಾಗವಾಗಿದೆ.

(A) (A) ಮತ್ತು (R) ಎರಡೂ ಸರಿ ಆದರೆ (R), (A) ಯ ಸರಿಯಾದ ಉತ್ತರವಲ್ಲ

(B) (A) ಮತ್ತು (R) ಎರಡೂ ತಪ್ಪು

(C) (A) ಮತ್ತು (R) ಎರಡೂ ಸರಿ (R), (A) ಯ ಸರಿಯಾದ ವಿವರಣೆ

(D) (A) ಸರಿ (R) ತಪ್ಪು

**46.** 'ಕೆಂಪು ಪಟ್ಟಿ'ಯನ್ನು ಸೃಷ್ಟಿಸುವ ಅಧಿಕಾರಶಾಹಿಯನ್ನು ಟೀಕಿಸಿದವರು ಯಾರು ?

(A) ಡಬ್ಲ್ಯೂ.ಬಿ. ಮುನ್ರೊ

(B) ಇ.ಎನ್. ಗ್ಲಾಡನ್

(C) ಚಾರ್ಲ್ಸ್ ಇ. ಮೆರಿಯಮ್

(D) ರಾಮ್ಸೆ ಮ್ಯೂರ್

**43. Assertion (A) :** Delegation leads to dual responsibility.

**Reason (R) :** While a subordinate carries out his assigned tasks the delegating superior is responsible for getting the job done.

(A) Both (A) and (R) are true and (R) is the correct explanation of (A)

(B) Both (A) and (R) are true and (R) is not the correct explanation of (A)

(C) (A) is false and (R) is correct

(D) (A) is true and (R) are false

**44.** The concept of Political Administration dichotomy was given by

(A) Frank Henry Goodnow

(B) James W. Fresler

(C) W. Paul Appleby

(D) Ordway Tead

**45. Assertion (A) :** Globalization has helped in redefining the government as "an entrepreneurial government".

**Reason (R) :** It was apart of reinventing government interms of less power and part of creating new public management.

(A) Both (A) and (R) are true but (R) is not the correct answer of (A)

(B) Both (A) and (R) are incorrect

(C) Both (A) and (R) are correct (R) is the correct explanation of (A)

(D) (A) is correct (R) is false

**46.** Who has criticized bureaucracy for creating 'red tapism' ?

(A) W.B. Munro

(B) E.N. Gladden

(C) Charles E. Merriam

(D) Ramsay Muir

**47.** ಈ ಕೆಳಗಿನವುಗಳಲ್ಲಿ ಯಾವುದನ್ನು ಪುಲ್‌ಟನ್ ಸಮಿತಿಯು ಶಿಫಾರಸ್ಸುಮಾಡಿದೆ ?

1) ಸಾಮಾನ್ಯೀಕರಣ
2) ಏಕೀಕೃತ ಮೌಲ್ಯಮಾಪನ ರಚನೆ
3) ತಜ್ಞತೆ
4) ವೃತ್ತಿಪರತೆ

ಈ ಕೆಳಗೆ ಕೊಟ್ಟಿರುವ ಸಂಕೇತಗಳನ್ನು ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ

(A) 1 ಮತ್ತು 2
(B) 2 ಮತ್ತು 3
(C) 1 ಮತ್ತು 3
(D) 2, 3 ಮತ್ತು 4

**48.** **ಪ್ರತಿಪಾದನೆ (A) :** ತಾಳಿಬಾಳುವ ಅಭಿವೃದ್ಧಿಯ ಸಂದರ್ಭದಲ್ಲಿ ರಿಯೋ ಘೋಷಣೆಯು 'ಹಸಿರು ಆರ್ಥಿಕತೆಯ' ಬಗ್ಗೆ ಕಳಕಳಿಯನ್ನು ಹೊಂದಿತ್ತು.

**ಕಾರಣ (R) :** ಬಡತನವು ಅತ್ಯಂತ ತೀವ್ರವಾಗಿದ್ದಾಗ ಮತ್ತು ಅದು ಅಭಿವೃದ್ಧಿಯ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಮಯದಲ್ಲಿ ರಿಯೋ ಘೋಷಣೆಯನ್ನು ಮಾಡಲಾಗಿತ್ತು.

ಮೇಲಿನ ಈ ಹೇಳಿಕೆಗಳ ಹಿನ್ನಲೆಯಲ್ಲಿ ಕೆಳಗಿನ ಯಾವ ಉತ್ತರ ಸರಿಯಾಗಿದೆ ?

(A) (A) ಮತ್ತು (R) ಎರಡೂ ಸರಿ (R), (A) ಯ ಸರಿಯಾದ ವಿವರಣೆಯಲ್ಲ
(B) (A) ಮತ್ತು (R) ಎರಡೂ ಸರಿ (R), (A) ಯ ಸರಿಯಾದ ವಿವರಣೆ
(C) (A) ಸರಿ ಆದರೆ (R) ತಪ್ಪು
(D) (A) ಮತ್ತು (R) ಎರಡೂ ತಪ್ಪು

**49.** ಈ ಕೆಳಗಿನವುಗಳಲ್ಲಿ ಯಾವುದು ಅಂತರ್‌ರಾಷ್ಟ್ರೀಯ ಹಣಕಾಸು ಸಂಸ್ಥೆಯ ಕಾರ್ಯವಾಗಿಲ್ಲ ?

(A) ವಿನಿಮಯ ಚಲನೆಯ ಭದ್ರತೆ
(B) ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು
(C) ದೇಶಗಳ ಸಾರ್ವಜನಿಕ ನೀತಿಯಲ್ಲಿ ಮಧ್ಯಪ್ರವೇಶಿಸುವುದು
(D) ಅಂತರ್‌ರಾಷ್ಟ್ರೀಯ ಆರ್ಥಿಕ ಸಹಕಾರವನ್ನು ವೃದ್ಧಿಸುವುದು

**50.** ಜಾಗತೀಕರಣ ಎಂದರೆ

(A) ಹಣಕಾಸಿನ ಮಾರುಕಟ್ಟೆಯ ವ್ಯವಸ್ಥೆಯು ಒಂದು ರಾಜ್ಯದಲ್ಲಿ ಕೇಂದ್ರೀಕೃತವಾಗುವುದು
(B) ಒಂದು ಒಗ್ಗೂಡಿದ ಮಾರುಕಟ್ಟೆಯ ಬೆಳವಣಿಗೆ
(C) ಒಂದು ಘಟಕದ ಭೌಗೋಳಿಕ ಸ್ಥಳಕ್ಕೆ ಹೆಚ್ಚಿನ ಪ್ರಾಮುಖ್ಯತೆ
(D) ವಿದೇಶಿ ಬಂಡವಾಳದ ವಹಿವಾಟು

**51.** ಈ ಕೆಳಗಿನವುಗಳಲ್ಲಿ ಯಾರೊಂದಿಗೆ ಅಂತರ್‌ರಾಷ್ಟ್ರೀಯ ಸಂಬಂಧದಲ್ಲಿರುವ ವ್ಯವಸ್ಥಾ ಸಿದ್ಧಾಂತವನ್ನು ಗುರುತಿಸಲಾಗಿದೆ ?

(A) ಹೆಚ್.ಜೆ. ಮೋರ್ಗೆಂಥೊ
(B) ರಾಬರ್ಟ್ ಕೆಹೋನ್
(C) ಮಾರ್ಟನ್ ಕಪ್ಲಾನ್
(D) ಅರ್ನೆಸ್ಟ್ ಬಿ. ಹಸ್

**47.** Which of the following was recommended by Fulton Committee ?

1) Generalism
2) Unified grading structure
3) Specialism
4) Professionalism

Select the correct answer using the codes given below

(A) 1 and 2

(B) 2 and 3

(C) 1 and 3

(D) 2, 3 and 4

**48.** **Assertion (A)** : Rio-Declaration was concerned about the green economy in the context of sustainable development.

**Reason (R)** : Rio-Declaration came at a time when poverty was too sharp, and was affecting development.

In the above context, which among the following is true ?

(A) Both (A) and (R) are true (R) is not the correct explanation of (A)

(B) Both (A) and (R) are true (R) is the correct explanation of (A)

(C) (A) is true but (R) is false

(D) Both (A) and (R) are wrong

**49.** Which among the following is not the purpose and functions of IMF ?

(A) Exchange rate stability

(B) Create more employment opportunity

(C) Intervene in public policy of the countries

(D) Promote international economic cooperation

**50.** Globalisation means

(A) Financial market system is centered in a single State

(B) The growth of a single unified market

(C) Geographical location of a firm is of utmost importance

(D) Foreign capitalist transaction

**51.** Who among the following is associated with systems theory in INR ?

(A) H.J. Morgenthau

(B) Robert Keohane

(C) Mortan Kaplan

(D) Ernest B. Hass

**52.** ಅಂತರ ರಾಷ್ಟ್ರೀಯ ಸಂಬಂಧದಲ್ಲಿ ಸಂಘರ್ಷ ಮತ್ತು ಶಾಂತಿ ಅಧ್ಯಯನಗಳ ಪ್ರಮುಖ ಪ್ರತಿಪಾದಕರು ಯಾರು ?

(A) ಆರ್. ಲಕ್ಸಂಬರ್ಗ

(B) ಕೆನೆತ್ ಬೌಲ್ಡಿಂಗ್

(C) ಹೆಚ್. ಬಟರ್‌ಫೀಲ್ಡ್

(D) ಹೆಡ್ಲಿ ಬುಲ್

**53.** ವ್ಯಕ್ತಿಗತ ಸ್ವಾತಂತ್ರ್ಯದ ಪ್ರತಿಪಾದಕರು

(A) ಅರಿಸ್ಟಾಟಲ್

(B) ಥಾಮಸ್ ಹಾಬ್ಸ್

(C) ಜೆ.ಎಸ್. ಮಿಲ್

(D) ಜರ್ಮಿ ಬೆಂಥಾಮ್

**54.** ಈ ಕೆಳಗಿನವುಗಳಲ್ಲಿ ಯಾವ ದೇಶವು ಯೂರೇಷಿಯನ್ ಒಕ್ಕೂಟದ ಸದಸ್ಯತ್ವವನ್ನು ಪಡೆದಿಲ್ಲ ?

(A) ರಷ್ಯಾ

(B) ಅಮೇರಿಕಾ

(C) ಕಝಕಸ್ಥಾನ್

(D) ಉಜ್ಬೇಕಸ್ಥಾನ್

**55.** 'ಮಂಡಲ' ಸಿದ್ಧಾಂತದಲ್ಲಿ ಈ ಕೆಳಕಂಡ ಯಾವ ಎರಡು ರಾಜರು ಮಂಡಲದಿಂದ ಹೊರಗಿಡಲ್ಪಟ್ಟಿದ್ದಾರೆ ?

(A) ಮಿತ್ರ ಹಾಗೂ ಅರಿಮಿತ್ರ

(B) ಅಕ್ರಂದ ಹಾಗೂ ಪಾರ್ಶ್ವನಿಗ್ರಹ

(C) ಮಧ್ಯಮ ಹಾಗೂ ಉದಾಸೀನ

(D) ಅರಿ ಮತ್ತು ಮಿತ್ರ

**56.** **ಪ್ರತಿಪಾದನೆ (A)** : ಶ್ರೀಮಂತ ಹಾಗೂ ಬಡದೇಶಗಳ ಬದಲಾಗಿ ಈಗ ಉತ್ತರ-ದಕ್ಷಿಣ ದೇಶಗಳಾಗಿವೆ.

**ಕಾರಣ (R)** : ಆರ್ಥಿಕ ಸ್ವಾತಂತ್ರ್ಯ ಮತ್ತು ನ್ಯಾಯಕ್ಕಾಗಿ ಮೂರನೇ ಜಗತ್ತಿನ ದೇಶಗಳು ಮಾಡಿದ ಹೋರಾಟವನ್ನು ಉತ್ತರ-ದಕ್ಷಿಣ ಸಂಘರ್ಷವೆಂದು ಗುರುತಿಸಲಾಗಿದೆ.

(A) (A) ಹಾಗೂ (R) ಎರಡೂ ಸರಿ ಮತ್ತು (R) ಎನ್ನುವುದು (A) ಯ ಸರಿಯಾದ ವಿವರಣೆಯಾಗಿದೆ

(B) (A) ಹಾಗೂ (R) ಎರಡೂ ಸರಿ ಆದರೆ (R) ಎನ್ನುವುದು A ಯ ಸರಿಯಾದ ವಿವರಣೆಯಾಗಿಲ್ಲ

(C) (A) ಸರಿ ಆದರೆ (R) ತಪ್ಪು

(D) (A) ತಪ್ಪು ಆದರೆ (R) ಸರಿ

**57.** ಈ ಕೆಳಗಿನ ಯಾವುದು ನಿಶಸ್ತ್ರೀಕರಣಕ್ಕೆ ಸಂಬಂಧಿಸಿಲ್ಲ ?

(A) (SALT) ಎಸ್.ಎ.ಎಲ್.ಟಿ.

(B) (NPT) ಎನ್.ಪಿ.ಟಿ.

(C) (NATO) ಎನ್.ಎ.ಟಿ.ಓ.

(D) (CTBT) ಸಿ.ಟಿ.ಬಿ.ಟಿ.

**58.** ಎ.ಎಸ್.ಇ.ಎ.ಎನ್. (ASEAN) ಅಸ್ತಿತ್ವಕ್ಕೆ ಬಂದದ್ದು

(A) ಆಗಸ್ಟ್ 6, 1967

(B) ಆಗಸ್ಟ್ 8, 1967

(C) ಆಗಸ್ಟ್ 9, 1967

(D) ಎಪ್ರಿಲ್ 10, 1967

**52.** The chief exponent of conflict and peace studies is in INRs

(A) R. Luxemburg

(B) Kenneth Boulding

(C) H. Butterfield

(D) Headley Bull

**53.** The champion of Individual Freedom is

(A) Aristotle

(B) Thomas Hobbes

(C) J.S. Mill

(D) Jeremy Bentham

**54.** Which country is not the member of Eurasian Union (EaU) ?

(A) Russia

(B) America

(C) Kazakhastan

(D) Uzbekhastan

**55.** In 'Mandala' theory who are the two kings kept outside the 'Mandala' ?

(A) Mitra and Arimitra

(B) Akranda and Parshwa Nigraha

(C) Madhyama and Udasina

(D) Ari and Mitra

**56.** **Assertion (A)** : Rich and Poor Nations have been replaced by North and South Countries.

**Reason (R)** : Struggle of the third world countries for economic independence and justice is known as North South conflict.

(A) (A) and (R) are true, (R) is the correct explanation of (A)

(B) (A) and (R) are true, but (R) is not the correct explanation of (A)

(C) (A) is true, but (R) is false

(D) (A) is false, but (R) is true

**57.** Which of the following is not related to disarmament ?

(A) SALT

(B) NPT

(C) NATO

(D) CTBT

**58.** ASEAN came into existence on

(A) $6^{th}$ August, 1967

(B) $8^{th}$ August, 1967

(C) $9^{th}$ August, 1967

(D) $10^{th}$ April, 1967

**59.** **ಪ್ರತಿಪಾದನೆ (A)** : ಭಾರತ – ಚೀನಾ ಸಂಬಂಧವನ್ನು ಸುಧಾರಿಸುವಲ್ಲಿ ಗಡಿ ವಿವಾದವು ಒಂದು ಪ್ರಮುಖ ಸಮಸ್ಯೆಯಾಗಿದೆ.

**ಕಾರಣ (R)** : ಭಾರತಕ್ಕೆ ಪ್ರತಿಯಾಗಿ ಒಂದು ಬಲವಾದ ಆರ್ಥಿಕ ವ್ಯವಸ್ಥೆಯನ್ನು ಕಟ್ಟಲು ಚೀನಾ ಬಯಸುತ್ತದೆ.

(A) (A) ಹಾಗೂ (R) ಎರಡೂ ಸರಿ ಮತ್ತು (R) ಎನ್ನುವುದು (A) ಯ ಸರಿಯಾದ ವಿವರಣೆಯಾಗಿದೆ

(B) (A) ಹಾಗೂ (R) ಎರಡೂ ಸರಿ ಆದರೆ (R) ಎನ್ನುವುದು A ಯ ಸರಿಯಾದ ವಿವರಣೆಯಾಗಿಲ್ಲ

(C) (A) ತಪ್ಪು ಆದರೆ (R) ಸರಿ

(D) (A) ಹಾಗೂ (R) ಎರಡೂ ತಪ್ಪು

**60.** ಮಾನವ ಹಕ್ಕು ಎಂದರೇನು ?

(A) ದೈವಿಕ ಇರುವಿಕೆಯ ವಿರೋಧವಾಗಿರುವ ಮಾನವನ ಹಕ್ಕುಗಳು

(B) ಒಬ್ಬ ಮಾನವನಾದುದರಿಂದ ಅವನಿಗೆ ಇರುವ ಹಕ್ಕುಗಳು

(C) ಮಾನವ ಜನಾಂಗವೆಂಬ ಪಂಗಡವಾಗಿ ಪಡೆದುಕೊಂಡಿರುವ ಒಂದು ಹಕ್ಕು

(D) ಮಾನವ ಸಮುದಾಯದ ಒಂದು ಹಕ್ಕು

**61.** 'ಹಸಿರು ಮತ್ತು ಸಂತೋಷದ ದಕ್ಷಿಣ ಏಷ್ಯಾದೆಡೆಗೆ', ಎನ್ನುವ ಈ ಘೋಷಣೆಯನ್ನು ಎಲ್ಲಿ ಅಳವಡಿಸಿಕೊಳ್ಳಲಾಯಿತು ?

(A) 13 ನೇ ಸಾರ್ಕ್ ಸಮ್ಮೇಳನದಲ್ಲಿ

(B) 14 ನೇ ಸಾರ್ಕ್ ಸಮ್ಮೇಳನದಲ್ಲಿ

(C) 15 ನೇ ಸಾರ್ಕ್ ಸಮ್ಮೇಳನದಲ್ಲಿ

(D) 16 ನೇ ಸಾರ್ಕ್ (SAARC) ಸಮ್ಮೇಳನದಲ್ಲಿ

**62.** ಈ ಕೆಳಕಂಡವರಲ್ಲಿ ಯಾರು ಭಾರತದ ಮೊದಲ ಮಹಿಳಾ ವಿದೇಶಾಂಗ ಸಚಿವೆಯಾದರು ?

(A) ನಜ್ಮ ಹೆಪ್ತುಲ್ಲಾ

(B) ಮಮತಾ ಬ್ಯಾನರ್ಜಿ

(C) ಆನಂದಿಬೆನ್ ಪಟೇಲ್

(D) ಸುಷ್ಮಾ ಸ್ವರಾಜ್

**63.** ಡಾ.ಬಿ.ಆರ್. ಅಂಬೇಡ್ಕರ್‌ರವರು ಯಾವ ಸಮಿತಿಯ ಮುಂದೆ ನಿಮ್ನ ವರ್ಗದವರಿಗೆ ಮೀಸಲು ಸ್ಥಾನ ನೀಡಬೇಕೆಂಬ ಬೇಡಿಕೆಯನ್ನು ಮಂಡಿಸಿದರು ?

(A) ಸೈಮನ್ ಕಮಿಷನ್

(B) ಮುದ್ದಿಮಾನ್ ಕಮಿಷನ್

(C) ಸೌತ್‌ಬರೋ ಕಮಿಷನ್

(D) ಮಾಂಟೆಗೋ ಚೆಲ್ಮ್ಸ್ ಫೋರ್ಡ್ ಕಮಿಷನ್

**59. Assertion (A)** : One of the problems in the normalization of India-China relation is the border dispute.

**Reason (R)** : China wants to build a strong economy vis-a-vis India.

(A) Both (A) and (R) are true (R) is the correct explanation of (A)

(B) Both (A) and (R) are true but (R) is not the correct explanation of (A)

(C) (A) is false but (R) is true

(D) Both (A) and (R) are incorrect

**60.** What is a human right ?

(A) A right humans have against a divine being

(B) A right one has because one is a human being

(C) A right of humanity (homosapiens) as a species

(D) A right of human community

**61.** The theme "towards a green and happy South Asia", was adopted at

(A) 13th SAARC summit

(B) 14th SAARC summit

(C) 15th SAARC summit

(D) 16th SAARC summit

**62.** Who among the following became the first women External Affairs Minister of India ?

(A) Najma Heftullah

(B) Mamata Banerjee

(C) Anandiben Patel

(D) Sushma Swaraj

**63.** Dr. B.R. Ambedkar made a plea for reservation of seats for the depressed classes before

(A) Simon Commission

(B) Muddiman Commission

(C) Southborough Commission

(D) Montego-Chelmsford Commission

**64.** ಈ ಕೆಳಗಿನ ಸಮಿತಿಗಳನ್ನು ಅವು ರಚಿತವಾದ ವರ್ಷದೊಂದಿಗೆ ಹೊಂದಿಸಿ ಬರೆಯಿರಿ.

| ಸಮಿತಿ | ವರ್ಷ |
|---|---|
| 1) ಬಲವಂತರಾಯ್ ಮೆಹ್ತಾ ಸಮಿತಿ | a. 1985 |
| 2) ಕೆ. ಸಂತಾನಮ್ ಸಮಿತಿ | b. 1963 |
| 3) ಅಶೋಕ್ ಮೆಹ್ತಾ ಸಮಿತಿ | c. 1957 |
| 4) ಜಿ.ವಿ.ಕೆ. ರಾವ್ ಸಮಿತಿ | d. 1978 |

| | 1 | 2 | 3 | 4 |
|---|---|---|---|---|
| (A) | c | b | a | d |
| (B) | c | d | b | a |
| (C) | c | b | d | a |
| (D) | a | d | b | c |

**65.** ಈ ಕೆಳಗಿನವುಗಳಲ್ಲಿ ಯಾವ ಪುಸ್ತಕವು ಅಂಬೇಡ್ಕರ್‌ರವರಿಂದ ಬರೆಯಲ್ಪಟ್ಟಿಲ್ಲ ?

(A) ದಿ. ಅನ್ನಿಹಿಲೇಷನ್ ಆಫ್. ಕಾಸ್ಟ್

(B) ದಿ ಅನ್‌ಟಚೇಬಲ್ಸ್

(C) ಅನ್‌ಟಚೇಬಲ್ಸ್, ದಲಿತ್ಸ ಇನ್ ಮಾಡರ್ನ್ ಇಂಡಿಯಾ

(D) ಫಿಲಾಸಫಿ ಆಫ್. ಹಿಂದೂಯಿಸಂ

**66.** ರಾಜ್ಯ ನಿರ್ದೇಶಕ ತತ್ವಗಳು ''ಸಾಮಾಜಿಕ ಕ್ರಾಂತಿಯನ್ನು ಸಾಧಿಸಲು ಅಗತ್ಯವಾದ ನಿರ್ಬಂಧಗಳನ್ನು ಸ್ಥಾಪಿಸುವ ಮೂಲಕ ಅಂತಹ ಕ್ರಾಂತಿಯ ಗುರಿಗಳ ಮುನ್‌ಸಾಧನೆಯ ಉದ್ದೇಶಗಳನ್ನು ಹೊಂದಿದೆ '', ಈ ಹೇಳಿಕೆಯನ್ನು ನೀಡಿದವರಾರು ?

(A) ಬಿ.ಎನ್. ರಾವ್

(B) ಬಿ.ಆರ್. ಅಂಬೇಡ್ಕರ್

(C) ಎಂ.ಸಿ. ಚಾಗ್ಲಾ

(D) ಗ್ರಾನ್‌ವಿಲ್ ಆಸ್ಟಿನ್

**67.** ಪ್ರಜಾಪ್ರಭುತ್ವದ ಶಾಸ್ತ್ರೀಯ ಸಿದ್ಧಾಂತದ ಒಂದು ವಿಮರ್ಶೆಯಾಗಿ ಪ್ರಜಾಪ್ರಭುತ್ವದ ನೈಜ ಸಿದ್ಧಾಂತವನ್ನು ರಚಿಸಿದವರು ಯಾರು ?

(A) ಹೆರಾಲ್ಡ್ ಲಾಸ್ಕಿ

(B) ಹೆನ್ನಾ ಅರೆಂಟ್

(C) ಅರ್ನೆಸ್ಟ್ ಬಾರ್ಕರ್

(D) ಶುಂಪೀಟರ್

**68.** ಈ ಕೆಳಗಿನವುಗಳಲ್ಲಿ ಯಾವುದು ಲೋಕಸಭೆಯ ತಾತ್ಕಾಲಿಕವಾಗಿ ನೇಮಕವಾದ (ಪ್ರೋಟೆಮ್) ಸಭಾಧ್ಯಕ್ಷರ ಕಾರ್ಯವಾಗಿಲ್ಲ ?

(A) ಸಭಾಧ್ಯಕ್ಷರ ಗೈರುಹಾಜರಿಯಲ್ಲಿ ಸದನದ ನಡಾವಳಿಯನ್ನು ನಡೆಸುವುದು

(B) ಸದನದ ಸದಸ್ಯರಿಗೆ ಪ್ರತಿಜ್ಞಾವಿಧಿ ಬೋಧಿಸಿ ಪೂರ್ಣಾವಧಿ ಸಭಾಧ್ಯಕ್ಷರು ನೇಮಕವಾಗುವವರೆಗೆ ಅಧಿಕಾರದಲ್ಲಿರುವುದು

(C) ಸದನದಲ್ಲಿ ಒಪ್ಪಿಗೆಯಾದ ಮಸೂದೆಗಳಿಗೆ ಅನುಮೋದನೆ ನೀಡುವುದು

(D) ಸದನದ ಚುನಾವಣಾ ದೃಢೀಕರಣ ಪತ್ರಗಳನ್ನು ಸರಿಯಾದ ಕ್ರಮದಲ್ಲಿವೆಯೇ ಎಂದು ಪರಿಶೀಲಿಸುವುದು

**64.** Match the following Committees with year of Constitution.

| Committee | Year |
|---|---|
| 1) Balawanthrai Mehta Committee | a. 1985 |
| 2) K. Santhanam Committee | b. 1963 |
| 3) Ashok Mehta Committee | c. 1957 |
| 4) G.V.K. Rao Committee | d. 1978 |

| | 1 | 2 | 3 | 4 |
|---|---|---|---|---|
| (A) | c | b | a | d |
| (B) | c | d | b | a |
| (C) | c | b | d | a |
| (D) | a | d | b | c |

**65.** Which among the following is not a book written by Ambedkar ?

(A) The Annihilation of Caste

(B) The untouchables

(C) Untouchables, Dalits in Modern India

(D) Philosophy of Hinduism

**66.** Who said that Directive Principles are "aimed at furthering the goals of the social revolution by establishing the conditions necessary for its achievement" ?

(A) B.N. Rao

(B) B.R. Ambedkar

(C) M.C. Chagla

(D) Granville Austin

**67.** The realist theory of democracy as a critique of the classical democracy was formulated by

(A) Harold Laski

(B) Hannah Arendt

(C) Earnest Barker

(D) Schumpeter

**68.** Which one among the following is a function of the Pro-Tem speaker of the Lok Sabha ?

(A) Conduct of the proceedings of the House in the absence of the Speaker

(B) Swear in the members of the House and hold the charge till a regular Speaker is elected

(C) Give his assent to the bills passed by the house

(D) To check if the election certificates of the house are in order

**69.** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೊದಲ ರಾಷ್ಟ್ರೀಯ ಆಯೋಗವನ್ನು ಯಾವ ವರ್ಷ ರಚಿಸಲಾಯಿತು ?

(A) 1982

(B) 1989

(C) 1990

(D) 1992

**70.** ಈ ಕೆಳಗಿನವುಗಳಲ್ಲಿ ಯಾವುದನ್ನು ನ್ಯಾಯಮೂರ್ತಿ ಎಂ.ಬಿ. ಷಾ ಆಯೋಗವು ವಿಚಾರಣೆಗೆ ಒಳಪಡಿಸುತ್ತಿದೆ ?

(A) ಕರ್ನಾಟಕದಲ್ಲಿ ಕಾನೂನುಬಾಹಿರ ಗಣಿಗಾರಿಕೆಯನ್ನು

(B) ಗೋವಾದಲ್ಲಿನ ಕಾನೂನುಬಾಹಿರ ಗಣಿಗಾರಿಕೆಯನ್ನು

(C) ದೇಶದಲ್ಲಿನ ಕಾನೂನುಬಾಹಿರ ಮರಳು ಮಾಫಿಯಾವನ್ನು

(D) ಮಾವೋವಾದಿ ಪೀಡಿತ ಪ್ರದೇಶಗಳಲ್ಲಿನ ಆರಕ್ಷಕ ದೌರ್ಜನ್ಯವನ್ನು

**71.** 'ಗ್ಲೋಬಲೈಸೇಷನ್ ಅಂಡ್ ಇಟ್ಸ್ ಡಿಸಕಂಟೆಂಟ್ಸ್'' ಈ ಪುಸ್ತಕವನ್ನು ಬರೆದವರು

(A) ಸಮೀರ್ ಅಮೀನ್

(B) ಜೋಸೆಫ್ ಸ್ಟಿಗ್ಲಿಟ್ಜ್

(C) ಅಮಾರ್ತ್ಯ ಸೇನ್

(D) ವಾರ್‌ವಿಕ್ ಮುರ್ರೆ

**72. ಪ್ರತಿಪಾದನೆ (A)** : 1985 ರಲ್ಲಿ ಯೋಜನಾ ಆಯೋಗವು ಪಂಚಾಯತ್ ರಾಜ್ ಸಂಸ್ಥೆಗಳ ವಿವಿಧ ಅಂಶಗಳನ್ನು ಅಧ್ಯಯನಮಾಡಲು ಜಿ.ವಿ.ಕೆ. ರಾವ್ ಸಮಿತಿಯನ್ನು ನೇಮಿಸಿತು.

**ಕಾರಣ (R)** : ಈ ಮೊದಲಿನ ಆಯೋಗಗಳ ವರದಿಗಳು ಗ್ರಾಮೀಣ ಅಭಿವೃದ್ಧಿಗೆ ಸಂಬಂಧಪಟ್ಟ ವಿಷಯಗಳತ್ತ ಗಮನ ಹರಿಸಲಿಲ್ಲ.

ಈ ಮೇಲಿನ ಹೇಳಿಕೆಗಳ ಹಿನ್ನಲೆಯಲ್ಲಿ ಈ ಕೆಳಕಂಡ ಯಾವುದು ಸರಿ ?

(A) (A) ಮತ್ತು (R) ಸರಿ (R) (A) ಯ ಸರಿಯಾದ ವಿವರಣೆ

(B) (A) ಮತ್ತು (R) ಸರಿ (R) (A) ಯ ಸರಿಯಾದ ವಿವರಣೆಯಲ್ಲ

(C) (A) ಸರಿ ಆದರೆ (R) ತಪ್ಪು

(D) (A) ತಪ್ಪು ಆದರೆ (R) ಸರಿ

**69.** The First National commission for scheduled castes and scheduled tribes was constituted in the year

(A) 1982

(B) 1989

(C) 1990

(D) 1992

**70.** Justice M.B. Shah Commission is probing into

(A) Illegal mining in Karnataka

(B) Illegal mining in Goa

(C) Illegal Sand Mafia in the country

(D) Police excesses in Maoist-infested areas

**71.** Who is the Author of 'Globalisation and its discontents' ?

(A) Sameer Amin

(B) Joseph Stiglitz

(C) Amartya Sen

(D) Warwick Murray

**72.** **Assertion (A)** : Planning commission appointed G.V.K. Rao committee in 1985 to study various assets of Panchayti Raj Institutions.

**Reason (R)** : Earlier committee reports failed to address the issues of rural development.

In the context of above statements which among the following is correct ?

(A) (A) and (R) are true (R) is the correct explanation of (A)

(B) Both (A) and (R) are correct but (R) is not the correct explanation of (A)

(C) (A) is true but (R) is false

(D) (A) is false but (R) is true

**73.** ಈ ಕೆಳಗಿನ ಯಾವ ಅವಧಿಯಲ್ಲಿ ಅಲಿಪ್ತ ರಾಷ್ಟ್ರಗಳ ಚಳುವಳಿಯು ಒಂದು ಸ್ಪಷ್ಟ ರೂಪ ಕೊಡುವ ಪ್ರಕ್ರಿಯೆಗೆ ಬಾಂಡುಂಗ್ ಸಮ್ಮೇಳನವು ಒಂದು ಹೆಗ್ಗುರುತಾಯಿತು ?

(A) ಎಪ್ರಿಲ್ 14 – 18, 1955

(B) ಎಪ್ರಿಲ್ 18 – 24, 1955

(C) ಎಪ್ರಿಲ್ 24 – 28, 1955

(D) ಮೇ 18 – 24, 1955

**74.** ಈ ಕೆಳಗಿನ ಹೇಳಿಕೆಯನ್ನು ನೀಡಿದವರು ಯಾರು ?

''ನಾವು ವೈರುದ್ಯದ ಬದುಕಿಗೆ ಕಾಲಿಡುತ್ತಿದ್ದೇವೆ. ರಾಜಕೀಯದಲ್ಲಿ ನಾವು ಸಮಾನತೆಯನ್ನು ಹೊಂದಿದ್ದೇವೆ ಮತ್ತು ಸಾಮಾಜಿಕ ಮತ್ತು ಆರ್ಥಿಕ ಬದುಕಿನಲ್ಲಿ ನಾವು ಅಸಮಾನತೆಯನ್ನು ಎದುರಿಸುತ್ತೇವೆ''.

(A) ಎಂ.ಕೆ. ಗಾಂಧಿ

(B) ಜವಾಹರ ಲಾಲ್ ನೆಹರೂ

(C) ಡಾ II ಬಿ.ಆರ್. ಅಂಬೇಡ್ಕರ್

(D) ಎಸ್.ಸಿ. ಬೋಸ್

**75.** ಡಿಸೆಂಬರ್ 17, 1946 ರಲ್ಲಿ ಅಂಬೇಡ್ಕರ್‌ರವರು ಸಂವಿಧಾನ ರಚನಾ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಹೀಗೆಂದರು : ''ಈ ದೇಶದ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ರಚನೆಗಳು ಭವಿಷ್ಯದಲ್ಲಿ ಹೇಗೆ ವಿಕಾಸಗೊಳ್ಳುತ್ತವೆ ಎನ್ನುವುದರ ಬಗ್ಗೆ ನನಗೆ ಸಣ್ಣ ಅನುಮಾನವೂ ಇಲ್ಲ. ಈಗ ನಾವು ರಾಜಕೀಯವಾಗಿ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಒಡೆದುಹೋಗಿದ್ದೇವೆ ಎನ್ನುವುದು ನನಗೆ ತಿಳಿದಿದೆ ..... ಇದೆಲ್ಲದರ ಹೊರತಾಗಿಯೂ ಅಗತ್ಯವಾದ ಕಾಲಾವಕಾಶ ಹಾಗೂ ಸಂದರ್ಭಗಳು ಒದಗಿ ಬಂದರೆ ಈ ದೇಶವು ಒಂದಾಗುವುದನ್ನು ತಡೆಯಲು ಜಗತ್ತಿನಲ್ಲಿ ಯಾರಿಗೂ ಸಾಧ್ಯವಿಲ್ಲ ಮತ್ತು ನಮ್ಮ ಎಲ್ಲ ಜಾತಿಗಳು ಹಾಗೂ ಮತಗಳ ನಡುವೆಯೂ ಒಂದಲ್ಲ ಒಂದು ಅರ್ಥದಲ್ಲಿ ನಾವೆಲ್ಲ ಒಗ್ಗಟ್ಟಾದ ಜನರಾಗುತ್ತೇವೆ ಎಂದು ಹೇಳಲು ನನಗೆ ಸ್ವಲ್ಪವೂ ಅಂಜಿಕೆಯಿಲ್ಲ''.

ಅಂಬೇಡ್ಕರ್‌ರವರ ಈ ಮಾತುಗಳು ಈ ಕೆಳಗಿನ ಯಾವುದನ್ನು ಅಭಿವ್ಯಕ್ತಿಗೊಳಿಸುತ್ತದೆ ?

(A) ಒಂದು ರಾಷ್ಟ್ರವಾಗಿ ರೂಪುಗೊಳ್ಳಲು ಭಾರತೀಯ ಜನರಿಗೆ ಇರುವ ಸಾಮರ್ಥ್ಯದ ಬಗ್ಗೆ ಅವರಿಗಿರುವ ನಂಬಿಕೆ

(B) ದೇಶದಲ್ಲಿರುವ ರಾಜಕೀಯ ಹಾಗೂ ಸಾಮಾಜಿಕ ವಿಭಜನೆಗಳ ಬಗ್ಗೆ ಅವರಿಗಿರುವ ಅಸಮಾಧಾನ

(C) ಭಾರತವು ಬೇರಾವುದೇ ರಾಷ್ಟ್ರಕ್ಕಿಂತ ಬಲವಾದ ರಾಷ್ಟ್ರವಾಗುತ್ತದೆ ಎನ್ನುವ ಅವರ ನಂಬಿಕೆ

(D) ಜಾತಿ ವ್ಯವಸ್ಥೆ ಹಾಗೂ ಆರ್ಥಿಕ ಅಸಮಾನತೆ ಎಂದೂ ಕೊನೆಗಾಣುವುದಿಲ್ಲ ಎನ್ನುವ ಬಗ್ಗೆ ಅವರಿಗಿರುವ ಅಚಲ ವಿಶ್ವಾಸ

**73.** The Bandung Conference was a landmark in the process of giving a concrete shape to the idea of NAM during the period of

(A) 14 – 18 April, 1955

(B) 18 – 24 April, 1955

(C) 24 – 28 April, 1955

(D) 18 – 24 May, 1955

**74.** Who said the following statement ? "We are going to enter into a life of contradictions. In politics, we shall have equality and in social and economic life, we will have inequality".

(A) M.K. Gandhi

(B) Jawaharlal Nehru

(C) Dr. B.R. Ambedkar

(D) S.C. Bose

**75.** Addressing the constituent assembly in December 17, 1946 Ambedkar said "I have not the slightest doubt about the future evolution of the social, political and economic structure of this country. I know today we are divided politically, economically and socially... with all this, I am convinced that given time and circumstances nothing in the world will prevent this country from becoming one, and with our caste and creeds I have not the sligheest hesitation in saying that we shall in some form be united people".

These words of Dr. Ambedkar express his

(A) faith in Indian people is ability to form one Nation

(B) resentment about political and social diversions with their the country

(C) belief that India will be a stronger Nation than any other in the world

(D) firm conviction that caste system and economic inequlity will never die

ಚಿತ್ತು ಬರಹಕ್ಕಾಗಿ ಸ್ಥಳ
Space for Rough Work